7. ನಿಯಮ ೬೯ರ ಮೇರೆಗೆ ಚರ್ಚೆ

ವಿಷಯ: ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆಯನ್ನು ನೀಡುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆದಂತಹ ರೈತರು ಕಬ್ಬಿಗೆ ಬೆಲೆಯನ್ನು ನಿಗಧಿ ಮಾಡಬೇಕೆಂದು ಹೇಳಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಕನಿಷ್ಠ ಅವರಿಗೆ ಮೊದಲನೆಯ ಕಂತಿನಲ್ಲಿ ಒಂದು ಟನ್‌ಗೆ 3,000 ರೂಪಾಯಿಗಳನ್ನು ಕೊಡಬೇಕು, 3,000 ರೂಪಾಯಿಗಳಿಗಿಂತ ಕಡಿಮೆ ಆದರೆ ಕಬ್ಬನ್ನು ಬೆಳೆಯು-ವುದಕ್ಕಾಗುವುದಿಲ್ಲ. ನಾವು ಬಹಳಷ್ಟು ನಷ್ಟಕ್ಕೆ ಒಳಗಾಗುತ್ತೇವೆ.ಇವತ್ತಿನ ದಿವಸ ಕಬ್ಬನ್ನು ಬೆಳೆಯುವುದಕ್ಕೆ ತಗಲುವಂತಹ ವೆಚ್ಚ ಹೆಚ್ಚಾಗುತ್ತಿದೆ. ಆ ಕಾರಣದಿಂದ ನಮಗೆ ಬೆಲೆಯನ್ನು ನಿಗಧಿ ಮಾಡಬೇಕೆನ್ನುವುದು ಒಂದು ಅಂಶವಾಗಿದೆ. ಈ ಬಗ್ಗೆ ಕೆಲವು ರಾಜ್ಯಗಳಲ್ಲಿ ಉತ್ತರಪ್ರದೇಶ, ಗುಜರಾತ್, ಪಂಜಾಬ್ ಹರಿಯಾಣ ಮತ್ತು ಉತ್ತರಾಂಚಲ ರಾಜ್ಯಗಳಲ್ಲಿ ರಾಜ್ಯ ಸಲಹಾ ಬೆಲೆ ನಿಗದಿ ಕಾಯಿದೆಯನ್ನು ಜಾರಿಗೆ ತಂದಿದ್ದಾರೆ. ಏಕೆಂದರೆ ಈ ಸಮಸ್ಯೆಯು ಪ್ರತಿ ವರ್ಷವು ಬರುತ್ತಲೇ ಇರುತ್ತದೆ. ರೈತರು ಸರ್ಕಾರವು ಕಬ್ಬಿಗೆ ಬೆಲೆಯನ್ನು ನಿಗಧಿ ಮಾಡಬೇಕೆಂದು ಹೇಳುವುದು. ಸರ್ಕಾರವು ಈ ಬಗ್ಗೆ ಮೀಟಿಂಗ್ ಮಾಡುವುದು, ಅವರು ಸಕ್ಕರೆ ಕಾರ್ಖಾನೆಯನ್ನು ನಡೆಸುವವರು ಅದಕ್ಕೆ ಒಪ್ಪಿಕೊಳ್ಳದೆ ಹೋಗುವುದು, ಈ ತರಹ ಆಗಿ ರೈತರಿಗೆ ದೊಡ್ಡ ಅನ್ಯಾಯವಾಗ ುತ್ತಿದೆ. ಇದಕ್ಕೆ ಒಂದು ಅಂತ್ಯವಾಗಬೇಕೆನ್ನುವುದು ರೈತರ ಒತ್ತಾಯವಾಗಿದೆ. ಈ ಬಗ್ಗೆ ಇಡೀ ರಾಜ್ಯದಲ್ಲಿ ಚಳುವಳಿಯು ನಡೆಯುತ್ತಿದೆ. ಮೈಸೂರು ಭಾಗ ದಲ್ಲಿಯೂ ಕೂಡ ಚಳುವಳಿಯೂ ನಡೆಯುತ್ತಿದೆ. ಅದರಲ್ಲಿಯೂ ವಿಶೇಷವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚು ಸಕ್ಕರೆ ಕಾರ್ಖಾನೆಗಳು ಈ ಭಾಗದಲ್ಲಿ ಇದೆ. ಮುಂಬೈ -ಕರ್ನಾಟಕ ಭಾಗ, ಗುಲ್ಬರ್ಗಾ ಭಾಗ ಎಲ್ಲವೂ ಸೇರಿದೆ. ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಮೈಸೂರು, ಚಾಮರಾಜ ನಗರ, ಮಂಡ್ಯ, ಹಾಸನ, ತುಮಕೂರು ಎಲ್ಲಾ ಭಾಗಗಳಲ್ಲಿಯೂ ಕೂಡ ಅಂದರೆ ಕಬ್ಬನ್ನು ಎಲ್ಲಿ ಬೆಳೆಯುತ್ತಾರೆ ಅಲ್ಲಿ ಸಮಸ್ಯೆ ಇದೆ. ೩,೫೦೦ ಕೋಟಿ ಟನ್‌ನಿಂದ ೪ ಕೋಟಿ ಟನ್‌ನಷ್ಟು ಕಬ್ಬನ್ನು ಬೆಳೆಯುತ್ತಾರೆ. ಇದರಿಂದ ಆರ್ಥಿಕ ಚಟುವಟಿಕೆಗಳು ರಾಜ್ಯದಲ್ಲಿ ನಡೆಯುತ್ತಿದೆ.

ಸುಮಾರು ೫೮ Sugar factory ಗಳು ಇವೆ. ಹೆಚ್ಚಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಇದೆ. ನಾವು ಇವತ್ತು ಉತ್ತರಕರ್ನಾಟಕ ಭಾಗವಾದ ಬೆಳಗಾಂನಲ್ಲಿ ಇವತ್ತು ಇಲ್ಲಿ ಸದನವು ಸೇರಿದೆ. ಇದೊಂದು ಐತಿಹಾಸಿಕವಾದ ದಿನವಾಗಿದ್ದು ಈ ದಿನವೇ ಮೊದಲ ಅಧಿವೇಶನವು ಈ ಕಟ್ಟಡದಲ್ಲಿ ಪ್ರಾರಂಭವಾಗಿದೆ. ನಾವು ಈ ದಿನ ಒಂದು ಒಳ್ಳೆಯ ನಿರ್ಣಯವನ್ನು ಮಾಡಬೇಕಾಗಿದೆ. ಈ ಸದನದ ಮೂಲಕ ಸರ್ಕಾರದ ಮೂಲಕ ರೈತರಿಗೆ ನ್ಯಾಯ ಕೊಡುವಂತಹ ಕೆಲಸವನ್ನು ಮಾಡಬೇಕಾಗಿದೆ. ಸರ್ಕಾರವು ಈ ಬಗ್ಗೆ ಕೂಡಲೇ ತೀರ್ಮಾನವನ್ನು ಮಾಡಬೇಕಾಗಿದೆ. ಚಳುವಳಿಗಳು ನಡೆಯುತ್ತಲೇ ಇದೆ. ಉಪವಾಸ ಸತ್ಯಾಗ್ರಹ ಹಾಗೂ ಧರಣಿ ಸತ್ಯಾಗ್ರಹವು ನಡೆಯುತ್ತಿದೆ. ಇವತ್ತು ಕೂಡ ಜಿಲ್ಲಾಧಿ-ಕಾರಿಯವರ ಕಛೇರಿಯ ಮುಂದೆ ಧರಣಿ ಕುಳಿತಿದ್ದಾರೆ. ಇಲ್ಲಿ ಎದುರುಗಡೆಯೇ ಚಳುವಳಿ ಮಾಡಲು ಕುಳಿತಿದ್ದಾರೆ. ಇಲ್ಲಿ ಅವರು ನಮಗೆ ನ್ಯಾಯಯುತವಾದ ಬೆಲೆಯನ್ನು ಕೊಡಿ ಎಂದು ಅವರ ಡಿಮ್ಯಾಂಡ್ ಆಗಿದೆ. ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಬೆಲೆಯನ್ನು ನಿಗಧಿ ಮಾಡಬೇಕು. ಅವರು ಮನವಿಯಲ್ಲಿ ಹೇಳಿರುವ ಪ್ರಕಾರ ಒಂದು ಎಕರೆಗೆ 30 ಟನ್ ಕಬ್ಬು ಬೆಳೆದರೆ ಅದಕ್ಕೆ 3160 ರೂಪಾಯಿಗಳು ಖರ್ಚು ತಗಲುತ್ತದೆ ಎಂದು ಹೇಳುತ್ತಾರೆ. ಕಬ್ಬನ್ನು ಕನಿಷ್ಠ 25 ಟನ್ ನಿಂದ 50 ಟನ್‌ವರೆಗೆ ಒಂದು ಎಕರೆಗೆ ಬೆಳೆಯುತ್ತಾರೆ depending upon the fertility of the land ಅದರ ಮೇಲೆ ಆಗುತ್ತದೆ. ಕಬ್ಬಿಗೆ ನೀರು ಸಿಗಬೇಕು, ಗೊಬ್ಬರವನ್ನು ಹಾಕಬೇಕು, ಸರಿಯಾದ ಕಾಲಕ್ಕೆ ಕಟಾವು ಮಾಡಬೇಕು. ಈ ಸಮಸ್ಯೆಗಳೆಲ್ಲವೂ ಕೂಡ ಇದೆ. ಈಗ ಗೊಬ್ಬರದ ಬೆಲೆಯು ಜಾಸ್ತಿಯಾಗಿದೆ,ಕೂಲಿಯೂ ಜಾಸ್ತಿಯಾಗಿದೆ. ಕೀಟನಾಶಕಗಳ ಬೆಲೆಯೂ ಕೂಡ ಜಾಸ್ತಿಯಾಗಿದೆ. ಕಟಾವು ಬೆಲೆಯೂ ಜಾಸ್ತಿಯಾಗಿದೆ. ಸಾಗಾಣಿಕೆಯೂ ಬೆಲೆಯು ಕೂಡ ಜಾಸ್ತಿಯಾಗಿದೆ. ಎತ್ತುಗಾಡಿಗಳು, ಟ್ರಕ್‌ಗಳು, ಟ್ರಾಕ್ಟರ್‌ಗಳು ಜಾಸ್ತಿ ಬೆಲೆಯೂ ಆಗುತ್ತಿದೆ. ಕಬ್ಬು ಬೆಳೆಯುವುದಕ್ಕೆ ಇವತ್ತು ವೆಚ್ಚವು ಜಾಸ್ತಿಯಾಗುತ್ತಿದೆ. ಅವರಿಗೆ ಸಿಗುವಂತಹ ಬೆಲೆಯು ಕಡಿಮೆಯಾಗುತ್ತಿದೆ. 2,200 ಮತ್ತು 2300 ರೂಪಾಯಿಗಳನ್ನು ಅನೇಕ ರೀತಿಯಲ್ಲಿ ಬೆಲೆಯನ್ನು ಕೊಡುತ್ತಿದ್ದಾರೆ. ಉತ್ತರಪ್ರದೇಶದಲ್ಲಿ ೮.೫% ಇಳುವರಿ ಇರುವಂತಹ ಕಬ್ಬಿಗೆ 2,700 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಗುಜರಾತ್‌ನಲ್ಲಿ 3,446

ರೂಪಾಯಿಗಳನ್ನು ಕೊಡುತ್ತಿದ್ದಾರೆ. ಪಂಜಾಬ್‌ನಲ್ಲಿ ೨೮೫೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಹರಿಯಾಣದಲ್ಲಿ 3,000 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಉತ್ತರಾಂಚಲದಲ್ಲಿ 2,800 ರೂಪಾಯಿ ಗಳನ್ನು ಕೊಡುತ್ತಿದ್ದಾರೆ. ಅಲ್ಲಿ ಅವರು ಟನ್ ಕಬ್ಬಿಗೆ ಇಷ್ಟು ಬೆಲೆ ಎಂದು ನಿಗಧಿ ಮಾಡಿದ್ದಾರೆ. ಇದಕ್ಕೆ State Advisory Price ಕಾಯಿದೆಯನ್ನು ತಂದರೆ ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಬೇರೆ ರಾಜ್ಯಗಳಲ್ಲಿ ಈ ಕಾಯಿದೆಯನ್ನು ಜಾರಿಗೆ ತಂದಿದ್ದಾರೆ. ಬೇರೆ ರಾಜ್ಯದಲ್ಲಿರುವಂತಹ ಕಾನೂನನ್ನು ತರಿಸಿಕೊಂಡು ಅವರು ಅಲ್ಲಿ ಹೇಗೆ ಮಾಡಿದ್ದಾರೆ ಅವರು ಇಳುವರಿಗೆ ಎಷ್ಟು ಪರ್ಸೆಂಟ್ ಹಣವನ್ನು ಕೊಡುತ್ತಿದ್ದಾರೆ, ಅದರ ಪ್ರಕಾರ ಇಲ್ಲಿಯೂ ಮಾಡಿದರೆ ರೈತರು ಇವತ್ತು ಏನು ಚಳುವಳಿಯನ್ನು ಮಾಡುತ್ತಿದ್ದಾರೆ ಆ ಚಳುವಳಿಯು ಪಾಪ ಅವರಿಗೆ ಏನು ತೊಂದರೆ ಇದೆ, ಅವರಿಗೆ ಪರಿಹಾರವನ್ನು ಕೊಟ್ಟಂತೆ ಆಗುತ್ತದೆ. ಈ ಬಗ್ಗೆ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಅವರಿಗೆ ಕನಿಷ್ಟ ಅಂದರೆ 3,000 ರೂಪಾಯಿಗಳನ್ನು ಕೊಡಬಹುದು. ಇವತ್ತಿನದಿವಸ ಸಕ್ಕರೆಯ ಬೆಲೆಯು ಜಾಸ್ತಿಯಾಗಿದೆ. ಜೊತೆಗೆ by-products ಗಳು ಅವರಿಗೆ ಸಿಗುತ್ತದೆ. ಮೊಲಾಸಸ್, ಕಬ್ಬಿನಸಿಪ್ಪೆ ಸಿಗುತ್ತದೆ, ಇದರಿಂದ ಅವರಿಗೆ ಹಣವು ಸಿಗುತ್ತದೆ. ಕಬ್ಬಿನ ಸಿಪ್ಪೆಯಿಂದಲೇ ಅವರು co-generation ಮಾಡಿಕೊಳ್ಳುತ್ತಾರೆ. ಮೊಲಾಸಸ್‌ನಿಂದ ಸ್ಪಿರಿಟ್ ಅನ್ನು ತಯಾರು ಮಾಡುತ್ತಾರೆ. ಇದರಿಂದ by-product ಗಳು ಆಗುತ್ತವೆ. ಪಾಪ ರೈತರಿಗೆ ಇವ್ಯಾವು ಇರುವುದಿಲ್ಲ. ಫ್ಯಾಕ್ಟರಿಯವರೇ ಕಬ್ಬನ್ನು ಕಟಾವು ಮಾಡಿಕೊಂಡು ಸಾಗಾಣಿಕೆ ಮಾಡುವುದು ಸಹ ಆಗಬೇಕಾಗಿದೆ. ಕೆಲವೊಂದು ಫ್ಯಾಕ್ಟರಿಗಳಲ್ಲಿ ಕಟಾವನ್ನು ಅವರೇ ಮಾಡಿಕೊಳ್ಳುತ್ತಾರೆ. ಇನ್ನು ಕೆಲವು ಫ್ಯಾಕ್ಟರಿಗಳಲ್ಲಿ ಕಟಾವು ಮತ್ತು ಸಾಗಾಣಿಕೆಯನ್ನು ಸಹ ರೈತರೇ ವಹಿಸಿಕೊಳ್ಳಬೇಕು, ಕೂಲಿಯನ್ನು ಕೊಡುವುದನ್ನು ಸಹ ಇವನೇ ವಹಿಸಿಕೊಳ್ಳಬೇಕು. ಹಾಗಾಗಿ ಇವರು ಕೊಡುವಂತಹ ಹಣದಲ್ಲಿ ಒಂದು ಟನ್‌ಗೆ 500 ರಿಂದ 600 ರೂಪಾಯಿಗಳು ಹೊರಟು ಹೋಗುತ್ತದೆ. ಹೀಗಾಗಿ ರೈತನು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಈ ಬಗ್ಗೆ ಅನೇಕ ಸಾರಿ ವಿಧಾನಸೌಧವನ್ನು ಮುತ್ತಿಗೆ ಹಾಕಿದ್ದಾರೆ, ಧರಣ ಮಾಡಿದ್ದಾರೆ. ಪೋಲೀಸ್‌ನವರು ಧರಣಿಯಲ್ಲಿ

ನಿರತರಾದವರ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ಅವರೆಲ್ಲರೂ ಹೊಡೆಸಿಕೊಂಡಿದ್ದಾರೆ, ಜೈಲಿಗೆ ಹೋಗಿದ್ದಾರೆ. ಈ ತರಹದ ಚಳುವಳಿಗಳು ನಡೆಯುತ್ತಲೇ ಇದೆ. ರೈತರಿಂದ ಸಂಘರ್ಷಗಳು ನಡೆಯುತ್ತಲೇ ಇದೆ. ಈ ಸಂಘರ್ಷಕ್ಕೆ ಅಂತ್ಯ ಹಾಡಬೇಕಾದುದು ಅಗತ್ಯವಾಗಿದೆ. I don't know ಸರ್ಕಾರ ಏತಕ್ಕಾಗಿ ಹಿಂದೆಮುಂದೆ ನೋಡುತ್ತಿದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಈ ಬಗ್ಗೆ ಕೆಲವು ಮಂತ್ರಿಗಳಿಗೂ ಸಹ ಗೊತ್ತಿದೆ. ಈ ಸದನದಲ್ಲಿ ಸಚಿವರಾದ ಉಮೇಶ್ ಕತ್ತಿಯವರು ಇದ್ದಾರೆ. ಇವರು ಎರಡು sugar factory ಅನ್ನು ನಡೆಸುತ್ತಿದ್ದಾರೆ. ಮುರುಗೇಶ್ ನಿರಾಣಿಯವರು ಇದ್ದಾರೆ ಅವರು ಸಹ sugar factory ಅನ್ನು ನಡೆಸುತ್ತಿದ್ದಾರೆ. ಮಾನ್ಯ ಜಾರಕಿಹೊಳಿಯವರೆ ನಿಮ್ಮದು ಇಲ್ಲವೆ? ಎಸ್. ಆರ್.ಪಾಟೀಲ್‌ರವರು ಸಹ sugar factory ಅನ್ನು ನಡೆಸುತ್ತಿದ್ದಾರೆ. ಇದರಲ್ಲಿ ನೀವು ಸಹ ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಿದ್ದೀರಿ. ಇದರಲ್ಲಿ ಯಾರ್‍ಯಾರು ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಿದ್ದಾರೋ ಅವರ ಬಗ್ಗೆ ಹೇಳುತ್ತಿದ್ದೇನೆ. ನಾವಂತೂ ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಿಲ್ಲವಲ್ಲಾ? ಮಾನ್ಯ ಮುರುಗೇಶ್ ನಿರಾಣಿಯವರೆ ನಾನು ದಾರಿಯಲ್ಲಿ ಬರುವಾಗ ನಿಮ್ಮ ಮನೆ ಮತ್ತು ಸಕ್ಕರೆ ಕಾರ್ಖಾನೆಯನ್ನು ನೋಡಿಕೊಂಡು ಬಂದಿದ್ದೇನೆ.

ಶ್ರೀ ಮುರುಗೇಶ್ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ನನಗೆ ನೀವು ಬರುವುದು ಗೊತ್ತಿದ್ದರೆ ನಾನು ನಿಮ್ಮನ್ನು ಕರೆಯಬೇಕೆಂದು ಇದ್ದೆ.

ಶ್ರೀ ಸಿದ್ದರಾಮಯ್ಯ:- ನೀವು ನನ್ನನ್ನು ಕರೆಯಬೇಕೆಂದು ಇದ್ದೀರಾ? ನೀವು ನನ್ನನ್ನು ಕರೆದಿದ್ದರೆ ನಿಮ್ಮ ಸಕ್ಕರೆ ಕಾರ್ಖಾನೆಯು ಹೇಗೆ ನಡೆಯುತ್ತಿದೆ ಎಂದು ನೋಡುವುದಕ್ಕಾಗಿ ಬರುತ್ತಿದ್ದೆ. ಏಕೆಂದರೆ ನಮಗಂತೂ ಸಕ್ಕರೆ ಕಾರ್ಖಾನೆಯನ್ನು ನಡೆಸುವುದಕ್ಕಾಗುವುದಿಲ್ಲವಲ್ಲಾ ಇವರಕಾರ್ಖಾನೆಯಲ್ಲಿ ಒಂದು ದಿನಕ್ಕೆ 15,000 ಟನ್ ಕಬ್ಬನ್ನು ಅರೆಯುತ್ತಾರೆ. ಒಂದು ದಿನಕ್ಕೆ ಸುಮಾರು 5,000 ಟನ್ ಕಬ್ಬನ್ನು ಅರೆದರೆ ನನಗೆ ಗೊತ್ತಿರುವ ಮಟ್ಟಿಗೆ ಸುಮಾರು 20 ರಿಂದ 30 ಕೋಟಿ ರೂಪಾಯಿಗಳ ಲಾಭ ಸಿಗುತ್ತದೆ. ಮಾನ್ಯ

ನಿರಾಣಿಯವರೆ, ಇದು ಹೌದೋ ಅಲ್ಲವೋ ಹೇಳಿ. ನಿಮಗೆ ಎಷ್ಟುಕೋಟಿ ಹಣ ಸಿಗಬಹುದು ಹೇಳಿ.

ಶ್ರೀ ಮುರುಗೇಶ್ ಆರ್ ನಿರಾಣಿ:- ನಾವು ಬ್ಯಾಂಕ್‌ನಿಂದ ತಂದಿರುವಂಥ ಸಾಲದ ಬಡ್ಡಿಯನ್ನು ತುಂಬಿ ಉಳಿದ ಹಣವನ್ನು ಸಂಪೂರ್ಣ ರೈತರಿಗೆ ಕೊಡುತ್ತೇವೆ.

ಶ್ರೀ ಸಿದ್ಧರಾಮಯ್ಯ:- ಆ ರೀತಿಯ ನಷ್ಟವಾಗಿದ್ದರೆ ಒಂದು ಷುಗರ್ ಫ್ಯಾಕ್ಟರಿ ಮೇಲೆ ಮತ್ತೊಂದು ಷುಗರ್ ಫ್ಯಾಕ್ಟರಿ , ಇನ್ನೆಲ್ಲಾದರೂ ಫ್ಯಾಕ್ಟರಿಗಳು ಸಿಗುತ್ತವೆಯೇ ಎಂದು ಹುಡುಕುತ್ತಾರೆ.

ಶ್ರೀ ಉಮೇಶ್ ವಿ. ಕತ್ತಿ:- ಒಂದು ಫ್ಯಾಕ್ಟರಿಯಿಂದ ಇನ್ನೊಂದು ಫ್ಯಾಕ್ಟರಿ ಮಾಡುವ ಉದ್ದೇಶ ರಾಜಕಾರಣ ಕಂಟ್ರೋಲ್ ಮಾಡಲಿಕ್ಕೆ. ಒಂದು ಷುಗರ್ ಫ್ಯಾಕ್ಟರಿ ಕೈಯಲ್ಲಿ ಇದ್ದರೆ ಅದರಿಂದ ರಾಜಕೀಯ ಮಾಡಲಿಕ್ಕೆ ಉಪಯೋಗ ಮಾಡುತ್ತಾರೆ ವಿನ: ಲಾಭ ಮಾಡಲಿಕ್ಕೆ ಉಪಯೋಗ ಮಾಡುವು-ದಿಲ್ಲ. ರಾಜಕೀಯ ಮಾಡಲಿಕ್ಕೆ ಅನುಕೂಲ ಮಾಡಿಕೊಳ್ಳಲಿಕ್ಕೆ ಸಕ್ಕರೆ ಕಾರ್ಖಾನೆಗಳನ್ನು ಮಾಡಿಕೊಳ್ಳುವಂಥ ಪದ್ಧತಿ ಮಹಾರಾಷ್ಟ್ರದಲ್ಲಿ ಇದೆ. ಅದರ ಉಪಯೋಗ ಅಷ್ಟೇ ಪಡೆಯುತ್ತೇವೆ ವಿನ: ಲಾಭ ಪಡೆಯುವ ಉದ್ದೇಶದಿಂದ ಮಾಡುವುದಿಲ್ಲ.

ಶ್ರೀ ಸಿದ್ಧರಾಮಯ್ಯ:- ನಿಮ್ಮಿಬ್ಬರಿಂದಲೇ ಬೆಲೆ ನಿಗದಿಯಾಗುತ್ತಿಲ್ಲ ಎಂದು ಈಗ ಜನ ಮಾತನಾಡಿಕೊಳ್ಳುತ್ತಿದ್ದಾರೆ.ನಿರಾಣಿಯವರಿಂದ ಮತ್ತು ಉಮೇಶ್ ಕತ್ತಿಯವರಿಂದ ಸರ್ಕಾರಕ್ಕೆ ಬೆಲೆ ನಿಗದಿ ಮಾಡಲಿಕ್ಕೆ ಆಗುತ್ತಿಲ್ಲ. ನನಗೇನೂ ಅದರ ಬಗ್ಗೆ knowledge ಇಲ್ಲ. ಜನ ಮಾತನಾಡಿ-ಕೊಳ್ಳುತ್ತಿರುವುದನ್ನು ಹೇಳುತ್ತಿದ್ದೇನೆ. ಕರ್ನಾಟಕ ಬಿಜೆಪಿ ಸರ್ಕಾರದಲ್ಲಿ ಪ್ರಭಾವಿ ಸಚಿವರುಗಳು ಇರುವುದರಿಂದ ಬೆಲೆ ನಿಗದಿ ಮಾಡಲಿಕ್ಕೆ ಆಗುತ್ತಿಲ್ಲವೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಶ್ರೀ ಉಮೇಶ್ ವಿ. ಕತ್ತಿ :- ಸಿದ್ಧರಾಮಯ್ಯನವರ ಜೊತೆ ನಾನು ಇದ್ದಾಗಲೂ ನನ್ನ ಷುಗರ್ ಕಾರ್ಖಾನೆ ಇತ್ತು. ಆಗಲೂ ಪ್ರಭಾವಿ ವ್ಯಕ್ತಿಯಾಗಿ ದ್ದೆನು, ಈಗಲೂ ಪ್ರಭಾವಿ ವ್ಯಕ್ತಿಯಾಗಿದ್ದೇನೆ. ಆಗಲೂ ಹೀಗೆ ಇದ್ದೆನು, ಈಗ-ಲೂ ಹೀಗೆ ಇದ್ದೇನೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾನೇನು ಹೇಳುತ್ತೇನೆ ಎಂದರೆ ಜನ ಮಾತನಾಡಿಕೊಳ್ಳುವುದು ನನಗೇನೂ ಗೊತ್ತಿಲ್ಲ, Personally I do not know . ಜನ ಏನೂ ಮಾತನಾಡಿಕೊಳ್ಳುತ್ತಿದ್ದಾರೆ ಎಂದರೆ ನಿರಾಣಿಯವರು powerful minister, ಉಮೇಶ್ ಕತ್ತಿಯವರು powerful minister. ಹಾಗಾಗಿ ಅವರು ರೈತರಿಗೆ ನ್ಯಾಯಯುತವಾದ ಬೆಲೆಯನ್ನು ನಿಗದಿ ಮಾಡಲಿಕ್ಕೆ ಬಿಡುತ್ತಿಲ್ಲ. ಸರ್ಕಾರದಲ್ಲಿ ಕೈಕಟ್ಟಿಕೊಂಡು ಕುಳಿತುಕೊಳ್ಳುವಂತೆ ಮಾಡಿಬಿಟ್ಟಿದ್ದಾರೆಂದು ಜನ ಮಾತನಾಡುತ್ತಿದ್ದಾರೆ. ನಾನು ಆ ರೀತಿ ಮಾತನಾಡುತ್ತಿಲ್ಲ. ವೈಯಕ್ತಿಕವಾಗಿ ನನಗೆ ಆ ಬಗ್ಗೆ ಗೊತ್ತಿಲ್ಲ. ನೀವೇನು ವಿಧಾನಸಭೆಯಲ್ಲಿ ನಮ್ಮ ಬಗ್ಗೆ ಮಾತನಾಡುವುದಿಲ್ಲವೆಂದು ರೈತರು ಬಂದು ನಮ್ಮ ಹತ್ತಿರ ಬಂದು ಕೇಳುತ್ತಾರೆ. ನನ್ನ ಕ್ಷೇತ್ರದಲ್ಲಿಯೂ ಬಣ್ಣಾರಿಯಮ್ಮ ಷುಗರ್ ಫ್ಯಾಕ್ಟರಿ ಇದೆ. ನಮ್ಮ ವರುಣಾ ಕ್ಷೇತ್ರದಲ್ಲಿ ಹಿಂದೆ ಮಹದೇವಪ್ಪನವರ ಕ್ಷೇತ್ರವಾಗಿತ್ತು. ಈಗೆಲ್ಲಾ ಖಾಸಗಿಯವರೇ ಜಾಸ್ತಿ ಷುಗರ್ ಫ್ಯಾಕ್ಟರಿಯವರು ನಡೆಸುತ್ತಿದ್ದಾರೆ. ಈಗೇನು ಸರ್ಕಾರಿ co-operative sugar factory ಇಲ್ಲವಲ್ಲ. ಪಾಂಡವಪುರದಲ್ಲಿ ಷುಗರ್ ಫ್ಯಾಕ್ಟರಿ ನಷ್ಟದಲ್ಲಿ ನಡೆಯುತ್ತಿದೆ. ನಾನೇನು ಹೇಳುತ್ತೇನೆಂದರೆ 10000 ಟನ್ ಕಬ್ಬನ್ನು ಅರೆಯುವಂಥ ಒಂದು ಷುಗರ್ ಫ್ಯಾಕ್ಟರಿ ಇದ್ದರೆ ಒಂದು ಸೀಸನ್‌ನಲ್ಲಿ 50 ಕೋಟಿ ರೂಪಾಯಿಗಳ ಲಾಭ ಸಿಗುತ್ತದೆಂದು ಹೇಳುತ್ತಾರೆ. ಇಲ್ಲವಾದಲ್ಲಿ ಶುಗರ್ ಫ್ಯಾಕ್ಟರಿಯವರು ಅಷ್ಟು ಬೇಗ ಬೆಳೆಯುವುದಕ್ಕೆ ಹೇಗೆ ಆಗುತ್ತದೆ. ಕೆಲವರೆಲ್ಲಾ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದು ಬಿಟ್ಟಿದ್ದಾರೆ. ಪಾಪ ಅವರು ಬೆಳೆಯಲಿ, ನನ್ನದೇನೂ ತಕರಾರು ಇಲ್ಲ. Investment ಮಾಡಿರುತ್ತಾರೆ, ಅವರು ಕಷ್ಟಪಟ್ಟಿರುತ್ತಾರೆ. ಎಲ್ಲಾ ಮಾಡಿರುತ್ತಾರೆ, ಅವರು ಲಾಭ ಮಾಡಿಕೊಳ್ಳಬಾರದೆಂದು ನಾನೇನು ಹೇಳುವುದಿಲ್ಲ. ಆದರೆ ರೈತರ ಶೋಷಣೆ ಆಗಬಾರದು. ರೈತರಿಗೆ ಅನ್ಯಾಯ ಆಗಬಾರದು. ಆದ್ದರಿಂದ ಈಗ ರೈತರು ಬಹಳ ದಿನಗಳಿಂದ ಈಗ ಜನ ಏನು ಮಾತನಾಡಿಕೊಳ್ಳುತ್ತಿದ್ದಾರೆ ಎಂದರೆ SAP ಕಾಯ್ದೆಯನ್ನು ತೆಗೆದುಕೊಂಡು ಬನ್ನಿ ಎಂದು ಬಹಳ ಒತ್ತಾಯ ಮಾಡುತ್ತಿದ್ದಾರೆ. ಅದನ್ನು ಮಾಡಿ, ಈಗ ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆ. ನೀವು ಮಾಡಿ. ನೀವೇಕೆ ಅದನ್ನು ಮಾಡಲಿಕ್ಕೆ ಹಿಂದೇಟು ಹಾಕುತ್ತಿದ್ದೀರಿ. ರೈತರಿಗೆ ಅನುಕೂಲವಾಗುವುದಾದರೆ ಮಾಡಿ, ರೈತರು ಒತ್ತಾಯ ಮಾಡುತ್ತಿದ್ದಾರೆ, ಅದನ್ನು ಮಾಡಬೇಕು, ರೈತರು ಚಳವಳಿ

ಮಾಡುತ್ತಿದ್ದಾರೆ, ಹೋರಾಟ ಮಾಡುತ್ತಿದ್ದಾರೆ, ಪ್ರತಿವರ್ಷ ಷುಗರ್ ಕಟಾವು ಬಂದ ತಕ್ಷಣ ಬೆಲೆ ನಿಗದಿ ಮಾಡಿ ಎಂದು ಹೇಳುತ್ತಾರೆ. ನೀವು ಮಾಡುವ ಹಾಗಿಲ್ಲ, ಅವರಿಗೆ ಸಿಗುವ ಹಾಗಿಲ್ಲ. ಅಂಥ ಪರಿಸ್ಥಿತಿ ಆಗಿಬಿಟ್ಟಿದೆ. ಆದ್ದರಿಂದ ನಾನೇನು ಒತ್ತಾಯ ಮಾಡುತ್ತಿದ್ದೇನೆಂದರೆ ಇದು ಬಹಳ ದಿನಗಳ ಒತ್ತಾಯ, ಬಹಳ ದಿನ ಗಳಿಂದ ಪೆಂಡಿಂಗ್ ಇದೆ. ಕನಿಷ್ಠ ಮೂರು ಸಾವಿರ ರೂಪಾಯಿ ಒಂದು ಟನ್‌ಗೆ ಕೊಡಬೇಕು.ಅವರು ಮೂರುವರೆ ಸಾವಿರ ಕೇಳುತ್ತಿದ್ದಾರೆ.

ಶ್ರೀ ಉಮೇಶ್ ವಿ.ಕತ್ತಿ:- ಈಗ SAP Act ಜಾರಿ ಮಾಡುವುದು revenue sharing ಆಧಾರದ ಮೇಲೆ. ಬರತಕ್ಕಂಥ ಒಟ್ಟಾರೆ ಆದಾಯದಲ್ಲಿ ರೈತರಿಗೆ ಎಷ್ಟು, ಫ್ಯಾಕ್ಟರಿಗೆಷ್ಟು ಎಂದು decide ಆಗುತ್ತದೆ. ಅದನ್ನು ಬಿಟ್ಟು ಇವತ್ತು ಮೂರು ಸಾವಿರ ಘೋಷಣೆ ಮಾಡಿದರೆ..

ಶ್ರೀ ಸಿದ್ಧರಾಮಯ್ಯ:- ನೀವು ಈಗ ಮೊದಲನೇ ಕಂತಿನಲ್ಲಿ ಕೊಡಿ, ಆಮೇಲೆ ತೀರ್ಮಾನ ಮಾಡಿ ಎಂದು ಅವರು ಹೇಳುವುದು.

ಶ್ರೀ ಉಮೇಶ್ ವಿ. ಕತ್ತಿ:- ಸಕ್ಕರೆ ಬೆಲೆಯೇ ಮೂರು ಸಾವಿರ ರೂಪಾಯಿ ಇದೆ. ಹೇಗೆ ತೀರ್ಮಾನ ಮಾಡುವುದು?

ಶ್ರೀ ಸಿದ್ಧರಾಮಯ್ಯ:- Initial price ಅದು.

ಶ್ರೀ ಉಮೇಶ್ ವಿ. ಕತ್ತಿ:- ಎಕಾರೆ ಬೆಳೆಗೆ ಮೂರು ಸಾವಿರ ರೂಪಾಯಿ ಇದೆ ಸರ್.

ಶ್ರೀ ಸಿದ್ಧರಾಮಯ್ಯ:- The very fact is, ಉಮೇಶ್ ಕತ್ತಿಯವರು argument ಮಾಡುವುದರಲ್ಲೇ ನೀವು ಅಡ್ಡ ಇದ್ದೀರಿ ಎಂದು ಗೊತ್ತಾಗಿಬಿಡುತ್ತದೆ.

ಶ್ರೀ ಉಮೇಶ್ ವಿ. ಕತ್ತಿ:- Last year average ಲಾಭ ಬಂದದ್ದು ೩೩೦೦ ರೂಪಾಯಿ ಆದಾಯ ಬಂದಿದೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, ನನಗೆ ಇದರ ಬಗ್ಗೆ ಗೊತ್ತಿಲ್ಲ. ರೈತರು ಇದರ ಬಗ್ಗೆ ಅಧ್ಯಯನ ಮಾಡಿದ್ದಾರೆ. ಬೇರೆ ರಾಜ್ಯ-ಗಳಲ್ಲಿಯೂ ಸಹ ನೋಡಿಕೊಂಡು ಬಂದಿದ್ದಾರೆ. ಬೇರೆ ರಾಜ್ಯಗಳಲ್ಲಿರತಕ್ಕಂಥ ಕಾಯ್ದೆಗಳನ್ನು ಸಹ ನೋಡಿದ್ದಾರೆ. ಈಗ SAP Act ಮಾಡಿ ಎಂದು ಹೇಳುತ್ತಿದ್ದಾರೆ. ಅವರು ಹೋರಾಟ ಮಾಡುತ್ತಿರುವುದೇ ಅದಕ್ಕೋಸ್ಕರ. ಬೇರೆ ರಾಜ್ಯಗಳಲ್ಲಿ ಎಷ್ಟೆಷ್ಟು ಬೆಲೆ ಕೊಡುತ್ತಿದ್ದಾರೆ ನೋಡಿ SAP Act ಮಾಡಿ ಬೆಲೆ

ನಿಗದಿ ಮಾಡಿದ್ದಾರೆ. ಈಗಾಗಲೇ ನಾನು ಹೇಳಿದೆ. ಉತ್ತರ ಪ್ರದೇಶದಲ್ಲಿ 2700-00, ಗುಜರಾತ್‌ನಲ್ಲಿ ಗಣದೇವಿ ಕಾರ್ಖಾನೆ ಎಂದು 3446-00, ಪಂಜಾಬ್‌ನಲ್ಲಿ 2850-00, ಹರಿಯಾಣದಲ್ಲಿ 3,000-00, ಉತ್ತರಾಂಚಲ್-ದಲ್ಲಿ 2,800-00. ಈ ರೀತಿ ನೀವು ಮಾಡಿ. ಅವರೊಂದಿಗೆ ಕುಳಿತು ಚರ್ಚೆ ಮಾಡಿ, ಕಾಯ್ದೆಗಳನ್ನು ತರಿಸಿಕೊಂಡು ನೋಡಿ ಆ ಐದು ಜಿಲ್ಲೆಗಳಲ್ಲಿ ಹೇಗೆ ಮಾಡಿದ್ದಾರೆ ನೋಡಿ. ನೀವು ಮಾಡಿ. ಇವೆಲ್ಲಾ ಹೆಚ್ಚಾಗಿ ಕಬ್ಬು ಬೆಳೆಯುವ ರಾಜ್ಯಗಳು ಮಾನ್ಯ ಅಧ್ಯಕ್ಷರೆ. ಮಹಾರಾಷ್ಟ್ರದಲ್ಲಿಯೂ ಕೂಡ ಹೆಚ್ಚಾಗಿ ಕಬ್ಬು ಬೆಳೆಯುತ್ತಿದ್ದಾರೆ. ಇವತ್ತು ಅಷ್ಟೊಂದು ರೈತರು ಇದರ ಮೇಲೆ ಅವಲಂಬನೆ ಆಗಿ ಬದುಕುತ್ತಿದ್ದಾರೆ. ಅದರಿಂದ ಬೇಕಾದಷ್ಟು ಆರ್ಥಿಕ ಚಟುವಟಿಕೆಗಳು ನಡೆಯುತ್ತಿವೆ. ಉದ್ಯೋಗ ಸಿಗುತ್ತಿವೆ. ಆರ್ಥಿಕ ಬೆಳವಣಿಗೆಗಳು ಆಗುತ್ತವೆ. ಆ ಉತ್ಪಾದನೆ ಮಾಡುವಂಥವರಿಗೆ ನ್ಯಾಯಯುತವಾದ ಬೆಲೆಯನ್ನು ಕೊಡ-ಬೇಕಾದುದು ನ್ಯಾಯ ಮತ್ತು ಸರಿಯಾದುದು. ಹಾಗಾಗಿ ಅವರ ಬೇಡಿಕೆ ಕೂಡ ಸರಿಯಾಗಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಕೂಡಲೇ ರೈತರ ಈ ಒತ್ತಾಯ ಏನಿದೆ ಅದನ್ನು ಈಡೇರಿಸುವಂಥ ಕೆಲಸವನ್ನು ಮಾಡ-ಬೇಕು. ಇಲ್ಲದೇ ಹೋದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಈ ಅನ್ಯಾಯವನ್ನು ತಪ್ಪಿಸುವಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಇವತ್ತು ಈ ಸದನದಲ್ಲಿ ಇದರ ಬಗ್ಗೆ ತೀರ್ಮಾನವಾಗ-ಬೇಕು. ಈಗ ನೀವು ಉತ್ತರ ಕೊಡುವಿರಿ? ಸರ್ಕಾರದ ಪರವಾಗಿ ನೀವು ಉತ್ತರ ಕೊಡುವಿರಾ? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ನೀವು ಮಾತನಾಡಿದರೆ ಸರ್ಕಾರದ ಪರ ಮಾತನಾಡಿದಂತೆ ಆಗುತ್ತದೆ. ನಿಮ್ಮ ಬಗ್ಗೆ ನಾನು ಅಪನಂಬಿಕೆಯಿಂದ ಮಾತನಾಡುತ್ತೇನೆಂದು ನೀವು ತಿಳಿದುಕೊಳ್ಳಬಾರದು. ನೀವು ಮಾತನಾಡಿದರೆ ರೈತರಿಗೆ ನಂಬಿಕೆ ಬರುವುದಿಲ್ಲ. ನಿಮ್ಮ ಮೇಲೆ ಅವರಿಗೆ ಕೋಪ ಇರುವುದು. ಒಂದು ನಿಮಿಷ ನಾನು ಹೇಳಿಬಿಡುತ್ತೇನೆ. ಈಗ ಉತ್ತರವನ್ನು ಮುಖ್ಯಮಂತ್ರಿಗಳು ಹೇಳಿದರೆ ಬಹಳ ಒಳ್ಳೆಯದು. ರೇವಣ್ಣನವರು ಮಾತನಾಡಿದ ಮೇಲೆ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ಆಮೇಲೆ ಬೇಕಾದರೆ ಸಪ್ಲಿಮೆಂಟ್ ಮಾಡುವಾಗ ನೀವು ಮಾತನಾಡಿ. ಸುಮ್ಮನೆ ನಿಮ್ಮ ಹೆಸರು

ಬಂದಿದ್ದಕ್ಕೆ ಹೇಳಿದೆ. ಜನ ಮಾತನಾಡುತ್ತಾರೆಂದು ಹೇಳಿದೆ, ಜನ ಮಾತನಾಡು-ವುದು ಸರಿಯಿಲ್ಲದಿದ್ದರೆ ಬಿಟ್ಟುಬಿಡಿ.

ಶ್ರೀ ಮುರುಗೇಶ್ ಆರ್.ನಿರಾಣಿ:- ನಾವು ಬಾಗಲಕೋಟೆ ಜಿಲ್ಲೆಯಲ್ಲಿ ನಾವು ಹೆಚ್ಚು ಕಬ್ಬು ಬೆಳೆಯುವಂಥ ರೈತರು.ಅದರ ಜೊತೆಗೆ ಕಬ್ಬು ಕಾರ್ಖಾನೆ-ಯಲ್ಲಿ ಇಲ್ಲದಿರುವಂಥ ಸಂದರ್ಭದಲ್ಲಿ ನಾವು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿರುವ ಹಿನ್ನೆಲೆ ಇದೆ. ಸಣ್ಣ ಉದಾಹರಣೆಯಾಗಿ ಕಳೆದ 60 ದಿವಸಗಳಿಂದ ಮುಧೋಳ ತಾಲ್ಲೂಕಿನಲ್ಲಿ ಕಬ್ಬು ಬೆಳೆಗಾರರು ಸತ್ಯಾಗ್ರಹ ಮಾಡುತ್ತಿದ್ದಾರೆ. ಪ್ರತಿ ಟನ್‌ಗೆ 2400-00 ರೂಪಾಯಿಗಳನ್ನು ಕೊಡಬೇಕೆಂದು ಅವರ ಪ್ರಮುಖ ಬೇಡಿಕೆ ಇದೆ. ಆ ಸಂದರ್ಭದಲ್ಲಿ ನಾವು ಅವರಲ್ಲಿ ವಿನಂತಿಯನ್ನು ಮಾಡಿದ್ದೇವೆ. ಮೊದಲನೇ ಕಂತಿನ ಹಣವನ್ನು ರೂ. 2200-00, ಎರಡನೆ ಕಂತಿನ ಹಣವನ್ನು ರೂ. 2400-00 ಕೊಡುತ್ತೇವೆ. ಮೂರನೇ ಕಂತಿನ ಹಣವನ್ನು ಸಕ್ಕರೆ ಮಾರಾಟ ಮತ್ತು ಮೊಲ್ಯಾಸಿಸ್ ಮತ್ತು ವಿದ್ಯುತ್‌ನ ಒಟ್ಟು ಆದಾಯವನ್ನು ನೋಡಿಕೊಂಡು ಮೂರನೆ ಬಿಲ್ ಕೊಡುತ್ತೇವೆಂದು ಹೇಳಿದ್ದೇವೆ. ಆ ಸಂದರ್ಭದಲ್ಲಿ negotiation ಆದಾಗ ರೈತರು ಮತ್ತು ನಮಗೆ ಕಬ್ಬು ಕೊಡುವಂಥವರ ಕಾರ್ಖಾನೆಯವರ ಮಧ್ಯದಲ್ಲಿ ಮಾತುಕತೆ ಆಗಿ 2300-00 ರೂಪಾಯಿಗಳಿಗೆ ಮೊದಲನೆ ಕಂತನ್ನು ಕೊಡಬೇಕೆಂದು ತೀರ್ಮಾನ ಆಯಿತು. ಅದರ ಸಲುವಾಗಿ ಸ್ಟ್ರೈಕ್ ಮುಕ್ತಾಯವಾಯಿತು. ನಾವು ಈಗ ಕಾರ್ಖಾನೆ ಪ್ರಾರಂಭ ಮಾಡಿದ್ದೇವೆ. ಅದಾದ ನಂತರ ಸ್ವಇಚ್ಛೆಯಿಂದ 2400-00 ರೂಪಾಯಿಗಳ ಘೋಷಣೆ ಮಾಡಿದ್ದೇವೆ. ನಂತರ ಇವತ್ತು 2500-00 ರೂಪಾಯಿಗಳನ್ನು ಪಕ್ಕದ ಕಾರ್ಖಾನೆಯವರು ಮಾಡಿದಾಗ ನಾವು ಯಾವುದೇ ರೈತರ ಪ್ರತಿಭಟನೆ ಇರಲಾರದೆ ಅವರ ಪ್ರಮುಖವಾದ ಬೇಡಿಕೆ ಪ್ರತಿ ಟನ್‌ಗೆ 2400-00 ರೂಪಾಯಿಗಳು ಮೊದಲನೆ ಕಂತಿನ ಹಣವನ್ನು ನಾವು ಸ್ವಇಚ್ಛೆಯಿಂದ Ex-field 2,500-00 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮತ್ತು Gate cane ಅವರೇ ಕಟಾವು ಮಾಡಿಕೊಂಡು transportation ಮಾಡಿ ಫ್ಯಾಕ್ಟರಿಗೆ ತಂದು ಕೊಟ್ಟರೆ 3100 ರೂಗಳನ್ನು ಕೊಡುತ್ತಿದ್ದೇವೆ. ಇದರಲ್ಲಿ ಯಾವುದೇ ಕಬ್ಬನ್ನು supply ಮಾಡುವ ರೈತರ ಪ್ರತಿಭಟನೆ ಮತ್ತು

ಹೋರಾಟವಿಲ್ಲ. ಕಳೆದ ವರ್ಷ 2011-12 ನೇ ಸಾಲಿನಲ್ಲಿ ಪ್ರತಿ ಟನ್‌ಗೆ 2000 ರೂ.ಗಳ ಬೆಲೆಯನ್ನು ಕೊಡಬೇಕೆಂಬ strike ಇಡೀ ರಾಜ್ಯಾದ್ಯಂತ ನಡೆಯುತ್ತಿತ್ತು. ಮೊದಲನೇ ಬಿಲ್ಲಿನಲ್ಲಿ 2000 ರೂ.ಗಳನ್ನು ಕೊಡಬೇಕೆಂದು ಸರ್ಕಾರ ಕೂಡ ಘೋಷಣೆ ಮಾಡಿತ್ತು. ಮೊದಲನೇ ಬಿಲ್ಲಿನಲ್ಲಿ 1800 ರೂ.ಗ- ಳನ್ನು ಕೊಟ್ಟಿದ್ದೇವೆ. ಎರಡನೇ ಬಿಲ್ಲಿನಲ್ಲಿ 200 ರೂ.ಗಳನ್ನು ಕೊಟ್ಟಿದ್ದು, ಮೂರನೇ ಬಿಲ್ಲಿನಲ್ಲಿ 150 ರೂ.ಗಳನ್ನು ಕೊಟ್ಟಿದ್ದೇವೆ. ಇದು Ex-field plus transportation extra ಅಂದರೆ ಸರ್ಕಾರ ಘೋಷಣೆ ಮಾಡಿದ್ದಕ್ಕಿಂತ ಹೆಚ್ಚಿ- ಗೇನೇ ಕೊಟ್ಟಿದ್ದೇವೆ. ಅದಕ್ಕೆ ರೈತರಿಂದ ಯಾವುದೇ ಪ್ರತಿಭಟನೆ ಅಥವಾ ಹೋರಾಟ ಕೂಡ ಆಗಿರಲಿಲ್ಲ. ರೈತರ ಬಗ್ಗೆ ಕಳಕಳಿಯಿಂದ ತಾವೇನು ಹೇಳಿದ್ದೀರಿ ಅದಕ್ಕೆ ನಮ್ಮ ಮತ್ತು ಮಾನ್ಯ ಉಮೇಶ್ ವಿ. ಕತ್ತಿಯವರ ಬೆಂಬಲ ಸಂಪೂರ್ಣವಾಗಿದೆ. ರೈತರು ಬದುಕಬೇಕು, ಅವರು ನೆಮ್ಮದಿಯಿಂದ ಇರಬೇಕು ಮತ್ತು ಅವರಿಗೆ ಹೆಚ್ಚಿನ ಆದಾಯ ಬರಬೇಕು. ಅದೇ ಸಂದರ್ಭದಲ್ಲಿ ಕಾರ್ಖಾನೆಗಳು ಸಹ ಜೀವಂತವಾಗಿ ಉಳಿಯಬೇಕು. ಕಾರ್ಖಾನೆಗಳು ಹೆಚ್ಚು ಲಾಭವನ್ನು ಮಾಡಿಕೊಳ್ಳಬೇಕೆಂಬ ಯಾವುದೇ ಉದ್ದೇಶ-ವಿಲ್ಲ. ಶಾಶ್ವತವಾಗಿ ಪ್ರತಿವರ್ಷ ಮಾಡುತ್ತಿರುವ ಪ್ರತಿಭಟನೆ ಮತ್ತು strike ಇದೆಲ್ಲ once for all close ಆಗಬೇಕು.ಈ ಸಲುವಾಗಿ ಒಂದು committee ಯನ್ನು ಮಾಡಿ ಕಬ್ಬು ಬೆಳೆಗಾರರು ಮತ್ತು ಫೆಡರೇಷನ್‌ರವರು, ಸಿಸ್ಮಾದವರು ಮತ್ತು ಕಾರ್ಖಾನೆಗಳ ಮಾಲೀಕರು 8-10 ಜನ ಕೂಡಿಕೊಂಡು ಒಟ್ಟು ಬರುತ್ತಿರುವ ಆದಾಯ ಮತ್ತು ಖರ್ಚು ಇದನ್ನು ಮಾಡಿಕೊಂಡು ಅವರಿಗೆ ನೇರವಾಗಿ ಕೊಡುವುದಕ್ಕೆ ನಮ್ಮ ಪ್ರೈವೇಟ್ ಷುಗರ್ ಫ್ಯಾಕ್ಟರಿಗಳದು objection ಇಲ್ಲ. ನಾವು ಕೊಡುವುದಕ್ಕೆ ಸಿದ್ಧರಿದ್ದೇವೆ. ಎರಡನೆಯದಾಗಿ, ಈಗೇನು ರೈತರು ಹೋರಾಟವನ್ನು ಮಾಡುತ್ತಿದ್ದಾರೆ ಅವರ ಕಡೆಯಿಂದ 15 ರಿಂದ 20 ವರ್ಷದಲ್ಲಿ ಸಾಕಷ್ಟು co-operative factory ಗಳಿದೆ. ರೈತರೇ ಸೇರಿಕೊಂಡು ಕಟ್ಟಿರುವಂತಹದ್ದು, ಸರ್ಕಾರವೇ ಅದಕ್ಕೆ ಷೇರು ಕೊಟ್ಟಿರುವಂತಹದ್ದು, ಮತ್ತು non profit making ಆಗಿ ಕಾರ್ಖಾನೆಗಳನ್ನು ನಡೆಸುತ್ತಿರುವಂತಹದ್ದು, ರೈತರ ಹಿಡಿತದಲ್ಲೇ ಇರುವಂತಹ ಕಾರ್ಖಾನೆಗಳು

ಕಳೆದ 20 ವರ್ಷಗಳಿಂದ ಏನು ರೈತರಿಗೆ ಬೆಲೆಯನ್ನು ಕೊಡುತ್ತಿದೆ, ಅದಕ್ಕೆ ಸರಿಸಮಾನವಾಗಿ ಇವತ್ತು ನಾವು ಖಾಸಗಿ ಕಾರ್ಖಾನೆಗಳವರು ಕೊಡುತ್ತಾ ಬಂದಿದ್ದೇವೆ. ಅಂದರೆ ಖಾಸಗಿ ಕಾರ್ಖಾನೆಗಳಿಗಷ್ಟೇ co-operative ನವರು ಕೊಟ್ಟಾಗ ನಮಗೆ 30 ಕೋಟಿ ರೂ.ಗಳಷ್ಟು ಐದು ಸಾವಿರ ಟನ್‌ಗಳಿಗೆ ಆಗ-ಬೇಕಾಗಿತ್ತೆಂದರೆ co-operative sector ರವರಿಗೆ ಆ ಲಾಭ ಎಲ್ಲಿ ಹೋಗುತ್ತದೆಯೆಂಬ ಬಗ್ಗೆ ಕೂಡ ನಾವು ಚರ್ಚೆ ಮಾಡಬೇಕಾಗುತ್ತದೆ. ಏಕೆಂದರೆ non profit making. ಖಾಸಗಿ ಕಾರ್ಖಾನೆಗಳು ಮಾಡಿದಾಗ ಒಂದು ೫೦-೧೦೦ ರೂ.ಗಳ ಲಾಭವನ್ನು ಇಟ್ಟುಕೊಂಡು ಮಾಡಬೇಕಾಗಿ ರುತ್ತದೆ. ಇಷ್ಟೆಲ್ಲಾ ಕೊಟ್ಟು ಕಾರ್ಖಾನೆಯನ್ನು development ಮಾಡಿದಾಗ ರೈತರ ಕೈಯಲ್ಲಿ ಇರುವಂತಹ ಕಾರ್ಖಾನೆ ಲೆಕ್ಕಪತ್ರ ಎಲ್ಲಾ ಅವರ ಕೈಯಲ್ಲಿರುತ್ತದೆ. ಅದರ ಸಲುವಾಗಿ ನಾವು ಯಾವುದೇ ರೀತಿಯಲ್ಲೂ ಕೂಡ ರೈತರಿಗೆ ಅನ್ಯಾಯ ಮಾಡುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ಬೆಲೆಯನ್ನು ರೈತರಿಗೆ ಕೊಡಬೇಕಾಗಿದೆ. ಮತ್ತು once for all set right ಮಾಡುವುದಕ್ಕೆ, profit sharing basis ತಂದರೆ ಅದು ರೈತರಿಗೆ ಮತ್ತು ಕಾರ್ಖಾನೆಗಳಿಗೆ ಒಳ್ಳೆಯದಾಗುತ್ತದೆ.

ಶ್ರೀ ಸಿದ್ಧರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಕಾರ್ಖಾನೆಗಳಿಗೂ ನಷ್ಟವಾಗುವುದಿಲ್ಲ. ನಮಗೂ ನ್ಯಾಯ-ಯುತವಾದ ಬೆಲೆ ಸಿಗುತ್ತದೆ State Advisory Price ಕಾಯಿದೆಯನ್ನು ಮಾಡಲಿ ಎಂದು ರೈತರ ಒತ್ತಾಯ ಇದೆ. ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆ ಅದನ್ನು ತರಿಸಿಕೊಂಡು ಮಾಡಿ. ಒಂದು ಬಾರಿ ಕಬ್ಬಿನ ಬೆಲೆ ಕಡಿಮೆಯಾದಾಗ ಕಬ್ಬನ್ನು ಕಿತ್ತು ಹಾಕುತ್ತಾರೆ. ಇದ್ದಕ್ಕಿದ್ದ ಹಾಗೆ ಬೆಲೆ ಜಾಸ್ತಿಯಾದಾಗ ಕಬ್ಬು ಹಾಕುತ್ತಾರೆ. ಅವರಿಗೆ ಕಡಿಮೆ ಬೆಲೆಗೆ ಕೊಡಬೇಕೆಂದು ಫ್ಯಾಕ್ಟರಿಯವರು ಒತ್ತಾಯ ಮಾಡುತ್ತಾರೆ. ಈ ರೀತಿ ಅನ್ಯಾಯಗಳಾಗುತ್ತಿರುತ್ತವೆ. ಇದಕ್ಕೆ ಅವರು ಏನು ಹೇಳುತ್ತಾರೆಂದರೆ ಇವರಿಗೂ ಅನ್ಯಾಯವಾಗುವುದು ಬೇಡ ನಮಗೂ ಅನ್ಯಾಯವಾಗುವುದು ಬೇಡ SAP ಕಾಯಿದೆಯನ್ನು ಬೇರೆ ರಾಜ್ಯದಲ್ಲಿ ತಂದಿದ್ದಾರೆ ಹಾಗೆ ನಮ್ಮ ರಾಜ್ಯದಲ್ಲೂ ಕೂಡ ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಅವರು ಹೇಳುತ್ತಿದ್ದಾರೆ. ಅದನ್ನು ನೀವು examine ಮಾಡಿದ್ದರೆ ತೆಗೆದುಕೊಂಡು ಬನ್ನಿ. ಈಗಿರುವ committee ಯನ್ನು ಬದಲಾಯಿಸ-

ಬೇಕು. Experts ಯಾರು ಇದ್ದಾರೆ ಅವರ ಒಂದು ಸಮಿತಿಯನ್ನು ಮಾಡಿ ಎಂದು ಹೇಳುತ್ತಾರೆ. ಅವರ ಡಿಮ್ಯಾಂಡ್ ನ್ಯಾಯಯುತ-ವಾಗಿದೆ. ಮಾನ್ಯ ಅಧ್ಯಕ್ಷರೆ ಮಾನ್ಯ ಹೆಚ್.ಡಿ.ರೇವಣ್ಣನವರು ಮಾತನಾಡಿದ ನಂತರ ನೀವು ಉತ್ತರ ಕೊಡಿ. ದಯವಿಟ್ಟು ಇದನ್ನು ಮಾಡಲೇಬೇಕು ಇವರಿಗೆ ಪರಿಹಾರವನ್ನು ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ ರೈತರು ಸುವರ್ಣ ವಿಧಾನಸೌಧ ಮುತ್ತಿಗೆ ಹಾಕುತ್ತೇವೆಂದು ಹೇಳಿ ಇಲ್ಲೇ ಚಳುವಳಿ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ):- ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರಿಗೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲವೆಂಬ ಭಾವನೆಯಿಂದ ಸುಮಾ-ರು ಸಾವಿರಾರು ಜನ ರೈತರು ಇವತ್ತು ಸುವರ್ಣ ವಿಧಾನಸೌಧವನ್ನು ಮುತ್ತಿಗೆ ಹಾಕಬೇಕೆಂದಿದ್ದಾರೆ. ಇವತ್ತು ಒಂದು ಟನ್‌ಗೆ ಕನಿಷ್ಠ ಮೂರು ಸಾವಿರ ರೂ. ಗಳನ್ನು ಕೊಡಬೇಕೆಂದು ರೈತರ ಬೇಡಿಕೆಯಿದೆ. ಈ ಬಗ್ಗೆ ಇವತ್ತು ರಾಜ್ಯದಲ್ಲಿ 67 ಸಹಕಾರಿ ಸಕ್ಕರೆ ಕಾರ್ಖಾನೆಗಳಿವೆ. ಇವುಗಳಲ್ಲಿ ಹಾಲಿ crushing ನಡೆಯುತ್ತಿರುವುದು ಸುಮಾರು ೫೮ ಸಕ್ಕರೆ ಕಾರ್ಖಾನೆಗಳಲ್ಲಿ. ಅದರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 23 ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ 20 ಸಕ್ಕರೆ ಕಾರ್ಖಾನೆಗಳು ಕ್ರಷಿಂಗ್ ಮಾಡುತ್ತಿವೆ. ಈಗ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಇವತ್ತು ಸುಮಾರು 20 ಕಾರ್ಖಾನೆಗಳು 2011-12 ನೇ ಸಾಲಿನಲ್ಲಿ ಕೆಲವು ಕಾರ್ಖಾನೆಗಳಲ್ಲಿ ೨೦೦೦ ರೂ.ಗಳನ್ನು ಕೊಟ್ಟಿದ್ದಾರೆ. ಕೆಲವು ಕಾರ್ಖಾನೆಗಳಲ್ಲಿ 1900 ರೂ.ಗಳನ್ನು ಕೊಟ್ಟಿದ್ದಾರೆ. ಇನ್ನೂ ಕೆಲವು ಕಾರ್ಖಾನೆಗಳಲ್ಲಿ 1800 ರೂ.ಗಳನ್ನು ಕೊಟ್ಟಿದ್ದಾರೆ. ಕೆಲವು ಕಾರ್ಖಾನೆಗಳಲ್ಲಿ ಆರು ತಿಂಗಳು ಒಂದು ವರ್ಷವಾದರೂ ಕೂಡ payment ಕೊಡದೆ ನಿಲ್ಲಿಸಿಕೊಂಡಿದ್ದಾರೆ. ಇವತ್ತು ನಿಮ್ಮ ಜಿಲ್ಲೆಯದೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಿಮ್ಮ ಜಿಲ್ಲೆಯಲ್ಲಿರುವ ಕೇದಾರ್‌ನಾಥ್ ಷುಗರ್ ಫ್ಯಾಕ್ಟರಿಯಲ್ಲಿ ರೈತರಿಂದಲೇ ಸುಮಾರು 132 ಕೋಟಿ ರೂ.ಗಳ ಷೇರುಗಳನ್ನು collect ಮಾಡಿ, ಎರಡು ವರ್ಷದಿಂದ payment ಕೊಟ್ಟಿದ್ದಾರಾ? ಎಷ್ಟು payment ಬಾಕಿಯಿದೆ? ಸುಮಾರು 36 ಕೋಟಿ ರೂಗಳಷ್ಟು payment ಇದೆ. ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ? ನಾನು ಒಂದು ಉದಾಹರಣೆಯನ್ನಷ್ಟೇ ಕೊಡುತ್ತಿದ್ದೇನೆ. ಸರ್ಕಾರಕ್ಕೆ ರೈತರ ಬಗ್ಗೆ

ಕಾಳಜಿ ಇರಬೇಕು. ರೈತರ ಹಣದಲ್ಲಿ ಸುಮಾರು 132 ಕೋಟಿ ರೂ.ಗಳ ಷೇರನ್ನು collect ಮಾಡಿ ಸುಮಾರು ಎರಡು ವರ್ಷಗಳಿಂದ ರೈತರಿಗೆ payment ಕೊಟ್ಟಿಲ್ಲವೆಂದರೆ ಏನರ್ಥ? ಮಾನ್ಯ ಮುರುಗೇಶ್ ಆರ್. ನಿರಾಣಿ ಯವರು ಅವರ ಕಾರ್ಖಾನೆಯಲ್ಲಿ 3100 ರೂ.ಗಳನ್ನು ಕೊಡುತ್ತಿದ್ದೇವೆಂದು ಹೇಳಿದರು, ಸಂತೋಷ. ದಿನಾಂಕ: 3-12-2012 ರಲ್ಲಿ ರೈತ ಮುಖಂಡರ ಸಭೆ ಮಾಡಿ ನಿರ್ಣಯ ಮಾಡಿದ್ದೀರಿ. ಇದನ್ನು ನಾನು ಹೇಳುತ್ತಿರುವುದಲ್ಲ ನಿಮ್ಮ ಸಭೆ ನಿರ್ಣಯದ ಮೇಲೆ ಹೇಳುತ್ತಿದ್ದೇನೆ. ಉತ್ತರ ಪ್ರದೇಶದಲ್ಲಿ ಒಂದು ಟನ್ ಕಬ್ಬಿಗೆ 2700 ರೂ.ಗಳಿದೆ. ಅದೇ ರೀತಿ ನಿಮ್ಮದೇ ಸರ್ಕಾರವಿರುವ ಗುಜರಾತ್‌ನಲ್ಲಿ 3446 ರೂ.ಗಳನ್ನು ಕೊಟ್ಟು, ಇಲ್ಲಿ 1900-2000 ರೂ.ಗಳ-ನ್ನು ಕೊಡುತ್ತೀರಿ. ಇನ್ನೂ ಕೆಲವು ಕಡೆ ಎರಡು ವರ್ಷವಾದರೂ payment ಕೊಡುವುದಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಪಂಜಾಬ್-ನಲ್ಲಿ 2850 ರೂ.ಗಳನ್ನು ಕೊಡುತ್ತಿದ್ದಾರೆ. ಅದೇ ರೀತಿ ಹರಿಯಾಣದಲ್ಲಿ 3000 ರೂ.ಗಳನ್ನು, ಉತ್ತರಾಂಚಲದಲ್ಲಿ 2800-3000 ರೂ.ಗಳನ್ನು ಕೊಡುತ್ತಿದ್ದಾರೆ. ಇದು ನನ್ನ ಮಾಹಿತಿಯಲ್ಲ. ನಿಮ್ಮ ಮಾಹಿತಿ ಪ್ರಕಾರ ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಕೆಲವು ಕಾರ್ಖಾನೆಗಳಲ್ಲಿ ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ 3 ತಿಂಗಳು, ೪ ತಿಂಗಳ, ೬ ತಿಂಗಳಾದರು payment ಕೊಟ್ಟಿಲ್ಲ. ಒಂದು ಕಡೆ ಗೊಬ್ಬರದ ಬೆಲೆ ಒಂದಕ್ಕೆ ನಾಲ್ಕು ಪಟ್ಟಿದೆ. ಕೇಂದ್ರ ಸರ್ಕಾರ ಗೊಬ್ಬರದ ಮೇಲೆ ಸಬ್ಸಿಡಿ ಕೊಡುತ್ತಿಲ್ಲ. Electricity rate ಒಂದಕ್ಕೆ ಮೂರು ಪಟ್ಟಿದೆ. ಮೂರು ಬಾರಿ current charge ಅನ್ನು ಹೆಚ್ಚು ಮಾಡಿದ್ದೀರಿ.ಡೀಸೆಲ್ ಬೆಲೆ ಜಾಸ್ತಿಯಾಗಿದೆ. ರೈತರ ಪರಿಸ್ಥಿತಿಯನ್ನು ನೀವು ಅರ್ಥ ಮಾಡಿಕೊಳ್ಳಬೇಕು. 2011 ನೇ ಇಸವಿಗೂ ಇವತ್ತಿಗೂ ರೈತರ ಮೇಲೆ ಯಾವ ರೀತಿ ಹೊರೆ ಬೀಳುತ್ತಿದೆಯೆಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಇದನ್ನು ಕಾರ್ಖಾನೆ ಮಾಲೀಕರು ಇದನ್ನು ಮನವರಿಕೆ ಮಾಡಬೇಕು. ಇವತ್ತು ಸುಮಾರು 37 ರೂ. ಗಳಿಂದ 40-50 ರೂ.ಗಳವರೆಗೆ ಒಂದು ಕೆ.ಜಿ ಸಕ್ಕರೆಯನ್ನು ಮಾರಾಟ ಮಾಡುತ್ತಾರೆ. ಕೆಲವು ಬಾರಿ hike ಆದಾಗ ಒಂದಕ್ಕೆ ಎರಡು ಪಟ್ಟು ಸಿಗುತ್ತದೆ. ಕೆಲವು ಸಂದರ್ಭದಲ್ಲಿ loss ಕೂಡ

ಆಗುತ್ತದೆ. ಲಾಭ ನಷ್ಟ ಎಂದು ಪರಿಗಣನೆ ಮಾಡಬಾರದು. ಇವತ್ತು ರೈತರನ್ನು ಮತ್ತು ಕಾರ್ಖಾನೆಗಳನ್ನು ನಾವು ಉಳಿಸಿಕೊಳ್ಳಬೇಕಾಗುತ್ತದೆ. ಕಾರ್ಖಾನೆ ಹಾಳಾಗಲಿ ಎಂಬ ದೃಷ್ಟಿಯಿಂದ ನಾನು ಹೇಳುತ್ತಿಲ್ಲ.

ಶ್ರೀ ಉಮೇಶ್ ವಿ. ಕತ್ತಿ:- ಒಂದು ಕೆ.ಜಿಗೆ ೩೦ ರೂ.ಗಳನ್ನು ಕೊಟ್ಟು ಸಕ್ಕರೆ ತಂದರೆ......

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಮ್ಮದು ಕಾರ್ಖಾನೆಯಿ-ಲ್ಲ. ನಾನು proceeding ಮಾಹಿತಿಯ ಮೇಲೆ ಹೇಳುತ್ತಿದ್ದೇನೆ. ದಿನಾಂಕ: 3-12-2011 ಕಬ್ಬು ಬೆಳಗಾರರ ಬಗ್ಗೆ ನಿಮ್ಮ ನಿರ್ದೇಶಕರ ಕಛೇರಿ Head Quarter Assistant ಮಾಡಿರುವ ದಾಖಲೆಗಳನ್ನು ಇಟ್ಟುಕೊಂಡು ಹೇಳುತ್ತಿದ್ದೇನೆ. ನನ್ನ ಬಳಿ ದಾಖಲೆಯಿದೆಯೇ? ನಿಮ್ಮಸರ್ಕಾರವೇ ದಾಖಲೆ ಕೊಟ್ಟಿರುವುದು. ಗುಜರಾತ್‌ನಲ್ಲಿ 3446 ರೂ.ಗಳನ್ನು ಒಂದು ಟನ್ ಕಬ್ಬಿಗೆ ಕೊಟ್ಟಿರುವುದು. ಇಲ್ಲಿ ಏಕೆ 2000 ರೂ.ಗಳಿಗೆ ತೆಗೆದುಕೊಳ್ಳುತ್ತೀರಿ? ಮಾನ್ಯ ಉಮೇಶ್ ಕತ್ತಿಯವರೇ ದಯಮಾಡಿ ಹೇಳಿ.

ಅಲ್ಲೂ ನಿಮ್ಮದೇ ಸರ್ಕಾರ, ಇಲ್ಲೂ ನಿಮ್ಮದೇ ಸರ್ಕಾರ, ವ್ಯತ್ಯಾಸ ಏನಿದೆ ಎಂಬುದನ್ನು ದಯಮಾಡಿ ತಿಳಿಸಿ. ಗುಜರಾತ್‌ನಲ್ಲಿ ೩,೪೦೦ ರೂ.ಗ-ಳನ್ನು ಕೊಡುತ್ತಾರೆ. ನಿಮ್ಮ ಇಲಾಖೆಯ ಸರ್ಕಾರಿ ಹಿರಿಯ ಅಧಿಕಾರಿಗಳು ಮಾಡಿರುವಂತಹ proceedings copy ಯಲ್ಲಿ ಇರುವುದನ್ನು ಹೇಳುತ್ತಿ-ದ್ದೇನೆ. ನಾನೇನು ಬೇರೆ ಹೇಳಿಕೆಯನ್ನು ಕೊಡುತ್ತಿಲ್ಲ. ಗುಜರಾತ್‌ನಲ್ಲಿ 3,446 ರೂ. ಗಳನ್ನು ಕೊಡುತ್ತಿದ್ದಾರೆ.

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ, ಅರೆ-ಸರ್ಕಾರಿ ಕೋ-ಆಪರೇಟಿವ್ ಫ್ಯಾಕ್ಟರಿಗಳಿವೆ. ಕೋ-ಆಪರೇಟಿವ್ ಫ್ಯಾಕ್ಟರಿಗಳು ಸಂಪೂರ್ಣವಾಗಿ ರೈತರ ಹಿಡಿತದಲ್ಲೇ ಇವೆ. ಏಕೆಂದರೆ ಅದರಲ್ಲಿ ರೈತರದ್ದು ಹಾಗು ಸರ್ಕಾರದ share ಗಳು ಇವೆ. ಒಟ್ಟು ಆದಾಯ ಎಷ್ಟು ಬರುತ್ತಿದೆ ಎನ್ನುವುದು ಆ ಬೋರ್ಡ್‌ಗಳಿಗೆ ಗೊತ್ತಿರುತ್ತದೆ. ಆ ಬೆಲೆ ನಿಗದಿ ಮಾಡುವುದಕ್ಕೆ ಕಬ್ಬು ಬೆಳೆಗಾರರು, ಕಬ್ಬು ಪೂರೈಕೆ ಮಾಡುವವರು ಹಾಗೂ ಕಾರ್ಖಾನೆಗಳು ಒಟ್ಟುಗೂಡಿ ಸಪ್ಲೈ ಮಾಡುತ್ತಾ ಬಂದಿದ್ದಾರೆ. ಕಳೆದ 10-15 ವರ್ಷಗಳ

ಇತಿಹಾಸವನ್ನು ತೆಗೆದು ನೋಡಿದಾಗ, ಮಾನ್ಯ ರೇವಣ್ಣನವರು ಹೇಳುತ್ತಿರುವ ಹಾಗೆ ರೂ.3,500-ರೂ.4,000 ಗಳನ್ನು ಬೇರೆ ರಾಜ್ಯಗಳಲ್ಲಿ ಕೊಡುತ್ತಿದ್ದಾರೆ ಎನ್ನುವುದು, ರೈತರ ಕೈಯಲ್ಲಿ ಇರುವ ಕಾರ್ಖಾನೆಗಳನ್ನು ನೋಡಿದರೆ ಅದು ಎಷ್ಟಿದೆ ಎನ್ನುವುದು ಗೊತ್ತಾಗುತ್ತದೆ. ಎಲ್ಲಾ ಕೋ-ಆಪರೇಟಿವ್ factoryಗಳಲ್ಲಿ 2,400 ರೂ.ಗಳನ್ನೇ ಕೊಡುತ್ತಿರುವುದು. ನಮ್ಮ ಉತ್ತರ ಕರ್ನಾಟಕದಲ್ಲಿ 2,500 ರೂ.ಗಳನ್ನು ಕೊಡುತ್ತಿದ್ದೇವೆ. ಕಳೆದ ೨೦ ವರ್ಷಗಳಿಂದ ಕೋ-ಆಪರೇಟಿವ್ ಫ್ಯಾಕ್ಟರಿ ಹಾಗೂ ಖಾಸಗಿ ಫ್ಯಾಕ್ಟರಿಗಳಿಗೆ equal ಆಗಿಯೇ ಕೊಡುತ್ತಿದ್ದಾರೆ. 35 ರೂ.ಗಳನ್ನು ಕೊಡುತ್ತಿರುವ ಕೋ-ಆಪರೇಟಿವ್ ಫ್ಯಾಕ್ಟರಿ-ಯ ಲಾಭವೇನು? 35 ರೂ.ಗಳನ್ನು ಗುಜರಾತ್‌ನಲ್ಲಿ ಕೊಡುತ್ತಿದ್ದಾರೆಂದರೆ, ಕರ್ನಾಟಕದಲ್ಲಿರುವ ಸರ್ಕಾರಿ ಕಾರ್ಖಾನೆಯ ಲಾಭವೇನು ಎನ್ನುವುದು ಪ್ರಶ್ನಾರ್ಥಕವಾಗುತ್ತಿದೆ. ಆ ರೀತಿಯ ಲಾಭವಿಲ್ಲ. ತಪ್ಪು ಮಾಹಿತಿ ಕಡತಕ್ಕೆ ಹೋಗುವಂತಹದಾಗಬಾರದು. ರೈತರ ಬಗ್ಗೆ ನಿಜವಾಗಿಯೂ ಕಳಕಳಿಯಿದೆ. ಕಳೆದ ೧೫ ವರ್ಷಗಳಿಂದ ರೈತರು ಪೂರೈಕೆ ಮಾಡುವಂತಹದು ಮತ್ತು ರೈತ-ರ ಬಗ್ಗೆ ಒಂದು ಒಳ್ಳೆಯ ಸಂಬಂಧವಿದೆ. ಪ್ರತಿವರ್ಷ strike ಆಗು-ವಂತಹದ್ದಾಗಬಾರದು. ಪ್ರತಿ ವರ್ಷ ಹೋರಾಟ ನಡೆದು ಸರ್ಕಾರದ ಸಮಯ waste ಆಗಬಾರದು. ಒಟ್ಟು ಆದಾಯವನ್ನು ಕ್ರೋಡೀಕರಣ ಮಾಡಿಕೊಂಡು profit sharing ನಲ್ಲಿ ಎಷ್ಟು ಲಾಭಾಂಶ ರೈತರಿಗೆ ಹೋಗ ಬೇಕು, ಎಷ್ಟು ಕಾರ್ಖಾನೆಗಳಿಗೆ ಹೋಗಬೇಕು ಎನ್ನುವುದನ್ನು ಚರ್ಚೆಮುಖಾಂತರ, ಅನುಭವಿ ರೈತರು, federation, ಸಿಸ್ಮಾ ದವರು ಎಲ್ಲರೂ ಒಟ್ಟಾಗಿ ಕುಳಿತು ಚರ್ಚೆ ಮಾಡಿ ಒಂದು conclusion ಗೆ ಬಂದರೆ ಒಳ್ಳೆಯದಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ :- ಕಾರ್ಖಾನೆಗಳು ಉಳಿಯಬೇಕು, ರೈತರು ಉಳಿಯಬೇಕು. ಇಂದು ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ಕಡೆ ಕೇಂದ್ರ ಸರ್ಕಾರ ಗೊಬ್ಬರದ ಮೇಲೆ ಸಬ್ಸಿಡಿ ತೆಗೆದು ಬರೆ ಎಳೆದಿದ್ದಾರೆ, ಡೀಸೆಲ್ ರೇಟ್ ಒಂದಕ್ಕೆ ಎರಡು ಪಟ್ಟು ಅಧಿಕವಾಗಿದೆ. ಕರೆಂಟ್ ರೇಟ್‌ನ್ನು ಮೂರು ಸಾರಿ hike ಮಾಡಿದ್ದೀರಿ. ಕೆಲವು ಕಡೆಗಳಲ್ಲಿ 400-500 ಅಡಿಗಳ-ಷ್ಟು ಕೊರೆಸಿದರೂ ನೀರಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೂ ಕೆಲವು ಕಡೆ ಕಬ್ಬು

ಬೆಳೆಯುವವರಿದ್ದಾರೆ. ರೈತರು ಬೆಳೆ ಬೆಳೆಯದೇ ವಿಧಿಯಿಲ್ಲ. ಆದರೂ ನಾನು ಉದಾಹರಣೆಗೆ ಹೇಳುವುದಾದರೆ, ನಿಮ್ಮ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿ ೧೩೨ ಕೋಟಿ ರೂ.ಗಳ ರೈತರ ಷೇರನ್ನೇ ಕಲೆಕ್ಟ್ ಮಾಡಿ ಎರಡು ವರ್ಷಗಳಿಂದ ಪೇಮೆಂಟ್ ಕೊಟ್ಟಿಲ್ಲ. ಸರ್ಕಾರ ಏನು ಮಾಡುತ್ತಿದೆ? ಪೇಮೆಂಟ್ ಕೊಡುವುದಕ್ಕೆ ಎರಡು ವರ್ಷಗಳ ಕಾಲ ಬೇಕೇ? 36 ಕೋಟಿ ರೂ.ಗಳನ್ನು 2 ವರ್ಷವಾದರೂ ಕೊಟ್ಟಿಲ್ಲವೆಂದರೆ ಸರ್ಕಾರಕ್ಕೆ ಹಿಡಿತವಿಲ್ಲವೇ? ಷೇರು ದುಡ್ಡು ರೈತರದ್ದೇ, ಫ್ಯಾಕ್ಟರಿ ಹಾಕುವುದಕ್ಕೇ ರೈತರೇ ಬಂಡವಾಳ ಹಾಕಿದ್ದಾರೆ, ಆದರೂ ಇಂದು 36 ಕೋಟಿ ರೂ.ಗಳನ್ನು ಕೊಟ್ಟಿಲ್ಲವೆಂದರೆ ಅರ್ಥವೇನು?

ಶ್ರೀ ಮುರುಗೇಶ್ ಆರ್. ನಿರಾಣಿ :- ಅವರು ಹೇಳುತ್ತಿರುವಂಥದ್ದು ಸತ್ಯ ಇದೆ. ಸರ್ಕಾರ ಇದರಲ್ಲಿ ಒಂದು ಆದೇಶವನ್ನು ಹೊರಡಿಸಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಒಂದು ಸೂಚನೆಯನ್ನು ಕೊಟ್ಟು, ಆ ಗೋ-ಡೌನ್‌ನಲ್ಲಿರುವ ಸಕ್ಕರೆ, ಮೋಲಾಸಿಸ್ ಅನ್ನು ಹಾಗೂ ಏನಾದರೂ ಮಾರಾಟ ಮಾಡುವಂತಹ ವಸ್ತುಗಳೇನಾದರೂ ಇದ್ದರೆ ಮಾರಾಟ ಮಾಡಿ ರೈತರಿಗೆ ಕಬ್ಬಿನ ಬೆಲೆಯನ್ನು ಕೊಡಬೇಕೆನ್ನುವುದು ನಿರ್ಧಾರ ಮಾಡಿದ್ದರು. ಆ ಸಕ್ಕರೆಯನ್ನು ಮಾರಿ ಅದರಲ್ಲಿ ಬರುವ ದುಡ್ಡನ್ನು ರೈತರಿಗೆ ಕೊಡುವಂತಹ ವ್ಯವಸ್ಥೆ ಮಾಡಿದ್ದಾರೆ. ಆ ಸಕ್ಕರೆ ಮಾರಾಟ ಮಾಡಿ ಇನ್ನೂ ಉಳಿದಿದೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಮಂತ್ರಿಗಳು ರೇವಣ್ಣನವರು ಹೇಳಿರುವುದು ನಿಜ ಎಂದು ಒಪ್ಪಿಕೊಂಡಿದ್ದಾರೆ. ಸರ್ಕಾರ ಎರಡು ವರ್ಷ ಕಣ್ಣು ಮುಚ್ಚಿಕೊಂಡಿದೆಯೇ? ಪ್ರೈವೇಟ್ ಫ್ಯಾಕ್ಟರಿ ಎಂದರೆ ಏನು ಮಾಡಬೇಕಾದರೂ ಮಾಡಬಹುದೇ? ಯಾರ ಮನೆ ಬೇಕಾದರೂ ಹಾಳು ಮಾಡಬಹುದೇ? ಅದಕ್ಕೇನು ಸರ್ಕಾರದ ಹಿಡಿತ ಇಲ್ಲವೇ? ಮಾನ್ಯ ದೇವೇಗೌಡರು ಬಂದು strike ಮಾಡಿ 20ಕೋಟಿ ರೂ.ಗಳ ದುಡ್ಡು ಕೊಡಿಸುವಂತಹ ಪರಿಸ್ಥಿತಿ ಬಂದಿದೆ. 132 ಕೋಟಿ ರೂ.ಗಳ ಷೇರು ಇರುವುದೂ ನಿಜ, ಎರಡು ವರ್ಷವಾದರೂ ದುಡ್ಡು ಕೊಟ್ಟಿಲ್ಲ ಎನ್ನುವುದು ನಿಜ ಎಂದು ಒಪ್ಪಿಕೊಳ್ಳುತ್ತಿ-ದ್ದಾರೆ. ಇನ್ನು 16 ಕೋಟಿ ರೂ.ಗಳ ಬಾಕಿ ಕೊಡಬೇಕು. ರೈತರು ಬಡ್ಡಿಗೆ ತಂದು ಬೆಳೆ ಬೆಳೆಸಿರುತ್ತಾರೆ. ಈ ರೀತಿ ಆದರೆ ರೈತರ ಪರಿಸ್ಥಿತಿ ಏನಾಗಬೇಕು? ಬೆಳಗಾಂ ಜಿಲ್ಲೆಯಲ್ಲಿಯೂ ನಿಮ್ಮದೂ ಸಹ 20 ಸಕ್ಕರೆ ಕಾರ್ಖಾನೆಗಳಿವೆ.

ಕಾರ್ಖಾನೆಗಳನ್ನು ಹಾಳು ಮಾಡಿ ಎಂದು ನಾನು ಹೇಳುತ್ತಿಲ್ಲ. ರೈತರನ್ನು ಹಾಗೂ ಕಾರ್ಖಾನೆ ಎರಡನ್ನೂ ಉಳಿಸಬೇಕು. ಈ ಬಗ್ಗೆ ಸರ್ಕಾರ ಒಂದು ಕಟ್ಟು ನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ರೈತರು ಬೆಳೆಯನ್ನು ಕಟಾವು ಮಾಡಿದ ತಕ್ಷಣ 75% ಹಣವನ್ನು ಕೊಡಬೇಕು. ಆದರೆ ಇಂದು ಒಂದು ಟನ್‌ಗೆ ಕಟಾವು ಮಾಡಬೇಕಾದರೆ 300-400 ರೂ.ಗಳನ್ನು ಕೊಡಬೇಕು. 1978-80 ನೇ ಇಸವಿಯಲ್ಲಿ ನಾನು ಕಬ್ಬು ಬೆಳೆಯಬೇಕಾದರೆ ಒಂದು ಟನ್‌ಗೆ ೫ ರೂ.ಗಳನ್ನು ಕಟಾವು ಮಾಡುವುದಕ್ಕೆ ಕೊಡುತ್ತಿದ್ದೆ. ಇವತ್ತು 500 ರೂ. ಗಳನ್ನು ಕೊಡಬೇಕು. ರೈತರ ಪರಿಸ್ಥಿತಿಯನ್ನು ಅರ್ಥಮಾಡಿ-ಕೊಳ್ಳಬೇಕು. ದಯಮಾಡಿ ಅರ್ಥಮಾಡಿಕೊಳ್ಳಿ. ಮಾನ್ಯ ನಿರಾಣಿಯವರು 3,100 ರೂ.ಗಳ-ನ್ನು ಕೊಡುತ್ತೇವೆಂದು ಹೇಳುತ್ತಾರೆ. ಉಳಿದ ಕಾರ್ಖಾನೆಗಳು ಏಕೆ ಕೊಡುತ್ತಿಲ್ಲ? ಕೆಲವರು 1800-1900 ರೂ.ಗಳನ್ನು ಕೊಡುತ್ತಿದ್ದಾರೆ, ಅವರ ಮೇಲೆ ಸರ್ಕಾರದ ಹಿಡಿತವೇನಿದೆ? ಇದನ್ನು ದಯಮಾಡಿ ಚರ್ಚೆ ಮಾಡಬೇಕು. ಇದರಿಂದ ಕಾರ್ಖಾನೆ ಮಾಲೀಕರಿಗೆ ಒಂದು ಸಾರಿ ಲಾಸ್ ಆಗ ಬಹುದು, ಕೆಲವು ಸಾರಿ ಸಕ್ಕರೆ ಬೆಲೆ ಒಂದಕ್ಕೆ ಮೂರು ಪಟ್ಟು ಹೆಚ್ಚು ಆಗುತ್ತದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ಮಾನ್ಯ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 230 ಕೋಟಿ ರೂ.ಗಳ support price ಕೊಟ್ಟಿದ್ದರು. 500 ಕೋಟಿ ರೂ. ಗಳನ್ನು ರೈತರಿಗೆ ಕೊಡಿ. ಒಂದು ಟನ್ ಗೆ 500-1000 ರೂ.ಗಳನ್ನು ಘೋಷಣೆ ಮಾಡಿ. ರೈತರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡದೇ ಹೋದರೆ ಮುಂದಿನ ದಿನಗಳಲ್ಲಿ ಯಾವುದೇ ಬೆಳೆ ಬೆಳೆಯುವುದಕ್ಕೆ ರೈತರು ಸಿಗುವುದಿಲ್ಲ. ವ್ಯವಸಾಯವೇ ಬೇಡವೆಂದು ಹೇಳಿ ಬೆಂಗಳೂರಿಗೆ ಹೋಗಿ ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ಕೆಲಸಕ್ಕೆ ಸೇರುವ ಪರಿಸ್ಥಿತಿ ಬರುತ್ತದೆ. ಆದಕಾರಣ ಸುವರ್ಣ-ಸೌಧದ ಮೊದಲ ದಿನದ ಅಧಿವೇಶನದ ಪ್ರಯುಕ್ತ ಸನ್ಮಾನ್ಯ ಮುಖ್ಯಮಂತ್ರಿ-ಗಳು ಘೋಷಣೆ ಮಾಡಬೇಕು. ಉತ್ತರ ಕರ್ನಾಟಕದ ಜನತೆಗೆ ಒಂದು ಟನ್‌ಗೆ ಒಂದು ಸಾವಿರ ರೂ.ಗಳ ಸಬ್ಸಿಡಿಯನ್ನು ಸರ್ಕಾರದಿಂದ ಕೊಡಿ. ಇದರಿಂದ ಏನಾಗುತ್ತದೆ? ಬಾಗಲಕೋಟೆ ಜಿಲ್ಲೆಯ ಕೇದಾರನಾಥ್ ಸಕ್ಕರೆ ಕಾರ್ಖಾನೆ ಅವರ ಹತ್ತಿರ ನಂತರ ವಸೂಲಿ ಮಾಡಲಿ. ರೈತರಿಗೆ 8-10 ದಿವಸಗಳಲ್ಲಿ ಪೇಮೆಂಟ್ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳ ಘೋಷಣೆ

ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. 3,000 ರೂ.ಗಳು ಅಲ್ಲದಿದ್ದರೆ 3,500 ರೂ.ಗಳನ್ನು ಕೊಡಿ. ಇಂದು ಗುಜರಾತ್‌ನಲ್ಲಿ 3,446.00 ರೂ.ಗಳನ್ನು ಕೊಡುತ್ತಿದ್ದಾರೆ. ರೈತರಿಗೆ ೫೦೦ ರೂ.ಗಳನ್ನು ಅಧಿಕವಾಗಿ ಕೊಟ್ಟರೆ ಏನೂ ಆಗುವುದಿಲ್ಲ. ದಯಮಾಡಿ ಸರ್ಕಾರ ಇದರ ಬಗ್ಗೆ subsidy ಯನ್ನು ಘೋಷಣೆ ಮಾಡಬೇಕು. ನಂತರ excise tax, purchase tax ಗಳನ್ನು ವಜಾ ಮಾಡಲಿ. 75 ರೂ.ಗಳಿದೆ. ಮಹಾರಾಷ್ಟ್ರದಲ್ಲಿ ಇಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಏನಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಬೆಳೆಗಾರರ ಹಿತದೃಷ್ಟಿಯನ್ನು ಕಾಪಾಡಬೇಕೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯಮಾಡುತ್ತಿದ್ದೇನೆ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ (ಜಮಖಂಡಿ) :- ಕರ್ನಾಟಕ ರಾಜ್ಯದ ಅದರಲ್ಲೂ ಈ ಭಾಗದಲ್ಲಿ ವಿಶೇಷವಾಗಿ ಕಬ್ಬು ಬೆಳೆಯುವಂತಹ ರೈತರ ಸಮಸ್ಯೆಗಳನ್ನು ಕುರಿತು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂ-ದು ತಮ್ಮಲ್ಲಿ ಒಂದು ಸೂಚನೆಯನ್ನು ಕೊಟ್ಟಿದ್ದೆ. ಆದರೆ ಈ ಸಂದರ್ಭದಲ್ಲಿ ಸನ್ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ರೇವಣ್ಣನವರು ಅದೇ ವಿಷಯವನ್ನು ಪ್ರಸ್ತಾಪ ಮಾಡಿ ಈ ಸದನದ ಗಮ-ನವನ್ನು ಸೆಳೆದಿದ್ದಾರೆ. ಬಹುಶ: ಇಡೀ ದೇಶದಲ್ಲಿ ಕಬ್ಬು ಬೆಳೆದಂತಹ ರೈತರಿಗೆ ಅವರ ಶ್ರಮಕ್ಕೆ ಪ್ರತಿಫಲವಾಗಿ ಅವರು ಸುರಿಸುವ ಬೆವರಿಗೆ ತಕ್ಕಂತೆ ಸರಿಯಾದ ಬೆಲೆ ಸಿಗಬೇ-ಕೆಂಬುದರ ಬಗ್ಗೆ ಚರ್ಚೆ ನಡೆದಿದೆ. ಉತ್ತರ ಪ್ರದೇಶ ಹಾಗೂ ಗುಜರಾತ್ ರಾಜ್ಯಗಳಲ್ಲಿ State Advisory price ಈ ಕಾನೂನನ್ನು ಜಾರಿಗೆ ತಂದು ರೈತರಿಗೆ ಸರಿಯಾದಂತಹ ನ್ಯಾಯ ಸಿಗಬೇಕು, ಯೋಗ್ಯವಾದ ಬೆಲೆ ಸಿಗಬೇಕು ಹಾಗೂ ಇದರ ಜೊತೆಗೆ ಕಬ್ಬನ್ನು ಖರೀದಿ ಮಾಡಿ ಸಕ್ಕರೆ ಉತ್ಪಾದನೆ ಮಾಡುವಂತಹ ಕಾರ್ಖಾನೆಗಳು ವ್ಯವಸ್ಥಿತವಾಗಿ ನಡೆಯಬೇಕೆನ್ನುವುದರ ಹಿನ್ನೆಲೆಯಲ್ಲಿ ಕ್ರಮಗಳನ್ನು ಜಾರಿಗೆ ತರಲಾಗಿತ್ತು. ನನಗೆ ಬಹಳ ಅಭಿಮಾನವನಿಸುತ್ತದೆ.

ಈ ಭಾಗದಲ್ಲಿ ಯಾವ ರೀತಿ ಮಹಾರಾಷ್ಟ್ರದಲ್ಲಿ ಸುಮಾರು 12% recovery ಬರುವಂಥ ಕಬ್ಬು ಬೆಳೆಯುತ್ತಿದ್ದಾರೆ ಇದನ್ನು ನೋಡಿದರೆ ಬಹಳ

ಅಭಿಮಾನ ಅನ್ನಿಸುತ್ತದೆ. ಈ ಬೆಳಗಾವಿ ಡಿವಿಜನ್‌ನಲ್ಲಿ ವಿಶೇಷವಾಗಿ ಮುಂಬೈ ಕರ್ನಾಟಕದಲ್ಲಿ ಕೃಷ್ಣಾ, ಮಲಪ್ರಭ ಮತ್ತು ಘಟಪ್ರಭ ಇತ್ಯಾದಿ ನದಿಗಳು ಹರಿಯುತ್ತಿರುವುದರಿಂದ ಈ ಭಾಗದಲ್ಲೂ ಕೂಡ ಅತ್ಯಂತ ಉತ್ಕೃಷ್ಟವಾದಂಥ ಕಬ್ಬು ಬೆಳೆಯುತ್ತಾರೆ. ಇಲ್ಲಿ ಬೆಳೆದಂಥ ಕಬ್ಬಿಗೆ ಸರಿಯಾದ ಬೆಲೆ ಕೊಡಬೇಕು ಎನ್ನುವ ಹಿನ್ನೆಲೆಯಲ್ಲಿ ನಾವು ಯೋಚನೆ ಮಾಡುವುದು ಬಹಳ ಅಗತ್ಯ ಎಂದು ನನಗೆ ಅನಿಸುತ್ತದೆ. ಇಲ್ಲಿ 12% recovery ಇರುವಂಥ ಕಬ್ಬಿಗೆ, ಕಬ್ಬನ್ನು ರೈತರಿಂದ ಖರೀದಿ ಮಾಡಿ, ಆ ಕಬ್ಬನ್ನು ಸಕ್ಕರೆಯನ್ನಾಗಿ ಪರಿವರ್ತನೆ ಮಾಡುವಾಗ ಬರುವಂಥ ಸಕ್ಕರೆ ಸುಮಾರು 120 ಕೆ.ಜಿ. ಸಕ್ಕರೆ ಉತ್ಪಾದನೆ ಆಗುತ್ತದೆ. ಇದರಿಂದ by-products ಕೂಡಾ ಸಾಕಷ್ಟು ಸಿಗುತ್ತದೆ. ೧ ಟನ್ ಕಬ್ಬಿನಿಂದ 40 ಕೆ.ಜಿ. molasses ಬರುತ್ತದೆ. ಈ molasses ನಿಂದ ethanol ಮತ್ತು spirit ಸಿಗುತ್ತದೆ. 40 ಕೆ.ಜಿ. molasses ನಿಂದ 9 ಲೀಟರ್ ethanol ಬರುತ್ತದೆ. ಅದು ಒಂದು ಲೀಟರ್‌ಗೆ ರೂ.27/- ರಂತೆ ಮಾರಾಟವಾಗುತ್ತದೆ. Spirit 11 ಲೀಟರ್ ಬರುತ್ತದೆ. ಅದು ಒಂದು ಲೀಟರ್‌ಗೆ ಸುಮಾರು ರೂ.30/-ರಂತೆ ಮಾರಾಟವಾಗುತ್ತದೆ. ಅದರ ಜೊತೆಗೆ bio-gas ಸುಮಾರು 40 ಕೆ.ಜಿ. ಬರುತ್ತದೆ, ಅದು ರೂ. 200/-ಗಳಿಗೆ ಮಾರಾಟವಾಗುತ್ತದೆ. ಇಷ್ಟೆಲ್ಲಾ by-products ಇದ್ದಾಗ, ಸಕ್ಕರೆಗೆ ಸಾಕಷ್ಟು ಒಳ್ಳೆಯ ರೇಟ್ ಮಾರುಕಟ್ಟೆಯಲ್ಲಿರುವಾಗ, ಆ ಸಕ್ಕರೆ ರೇಟ್ ತಿಂಗಳಿನಿಂದ ತಿಂಗಳಿಗೆ, ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿದೆಯೇ ಹೊರತು ಕಡಿಮೆ-ಯಾಗಿಲ್ಲ. ರೈತನಿಂದ ಕಬ್ಬು ಖರೀದಿ ಮಾಡಿ, ಆ ಕಬ್ಬನ್ನು ಸಕ್ಕರೆಯನ್ನಾಗಿ ಮಾಡಬೇಕಾದರೆ ವಿವಿಧ ರೀತಿಯಲ್ಲಿ ಆ ಕಾರ್ಖಾನೆಗೆ ಖರ್ಚುಗಳು ಬರುತ್ತವೆ. ಅದು ಸಹಕಾರಿ ಸಕ್ಕರೆ ಕಾರ್ಖಾನೆ ಇರಬಹುದು ಅಥವಾ ಮಾಲ್ಕಿಯ ಸಕ್ಕರೆ ಕಾರ್ಖಾನೆ ಇರಬಹುದು. ಅಲ್ಲಿ ಒಟ್ಟಾರೆ ಲೆಕ್ಕ ಹಾಕಿದರೆ ಅವರು ಪಡೆದಿರುವಂಥ ಸಾಲ, ಆ ಸಾಲದ ಮೇಲೆ ಆಖೈರು ಮಾಡುವಂಥ ಬಡ್ಡಿ ಒಟ್ಟಾರೆ ಬರುವಂಥ labour charge ಇತ್ಯಾದಿ ಎಲ್ಲಾ ಲೆಕ್ಕ ಹಾಕಿದರೂ ಸುಮಾರು ರೂ.920/-

ಖರ್ಚು ಬರುತ್ತದೆ. 1 ಟನ್ ಕಬ್ಬನ್ನು 1 ಕ್ವಿಂಟಾಲ್ ಸಕ್ಕರೆ ಮಾಡಬೇಕಾದರೆ ಸುಮಾರು ರೂ. 920/- ಖರ್ಚು ಬಂದಾಗ, ಒಟ್ಟಾರೆ ಇವತ್ತಿನ ರೇಟ್ ಪ್ರಕಾರ ಲೆಕ್ಕ ಹಾಕಿದರೆ 1 ಕ್ವಿಂಟಾಲ್ ಸಕ್ಕರೆಗೆ ರೈತನಿಗೆ ಅಥವಾ ಫ್ಯಾಕ್ಟರಿಗೆ ರೂ. 3453/- ಉಳಿಯುತ್ತದೆ. 1 ಟನ್ ಕಬ್ಬಿಗೆ ಇವತ್ತು ರೈತ-ನ ಬೇಡಿಕೆ ಏನೆಂದರೆ ರೂ. 3000/-ಗಳು ಕೊಡಿ ಎಂದು ಕೇಳುತ್ತಿದ್ದಾರೆ.

(ಈ ಹಂತದಲ್ಲಿ ಉಪ ಸಭಾಧ್ಯಕ್ಷರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಶ್ರೀಕಾಂತ ಎಸ್. ಕುಲಕರ್ಣಿ :- ಈ ಭಾಗದಲ್ಲಿ ಅನೇಕ ತರಹದ ಹೋರಾಟಗಳನ್ನು ರೈತ ಸಂಘಟನೆಗಳು ಮಾಡಿದವು. ಅವರ ಬೇಡಿಕೆ ಏನೆಂದರೆ, ಕಬ್ಬು ಖರೀದಿಗೆ ಮೊದಲನೇ ಕಂತು ರೂ.2400/- ಕೊಡಬೇಕೆಂ-ದು ಬೇಡಿಕೆ ಇಟ್ಟಿದ್ದರು. ಈ ಸಂದರ್ಭದಲ್ಲಿ ಅನೇಕ ಜನಪ್ರತಿನಿಧಿ-ಗಳು, ಸರ್ಕಾರ ವಿಶೇಷವಾಗಿ ನಮ್ಮ ಬೆಳಗಾವಿ, ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಸನ್ಮಾನ್ಯ ಗೋವಿಂದ ಕಾರಜೋಳ ಸಾಹೇಬರು, ನಮ್ಮ ಸಚೇತಕರಾದ ಸಿದ್ದುಸವದಿಯವರು, ಜಿಲ್ಲಾಧಿಕಾರಿಗಳು ಹಾಗೂ ಇಡೀ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಒಂದು ಕಡೆ ಸೇರಿಕೊಂಡು ರೈತ ಪ್ರತಿನಿಧಿಗಳು ಮತ್ತು ಫ್ಯಾಕ್ಟರಿ ಮಾಲೀಕರುಗಳನ್ನು ಕರೆದು ಮಾತನಾಡಿ, ಚರ್ಚೆ ಮಾಡಿ ಸಮಸ್ಯೆ ಬಗೆಹರಿಸುವ ಪ್ರಯತ್ನ ನಡೆಯಿತು. ಆದರೆ ದು:ಖದಿಂದ, ವಿಷಾದದಿಂದ ಹೇಳಬೇಕೆಂದರೆ, ಯಾವುದೇ ಕಾರ್ಖಾನೆಯ ಮಾಲೀಕರು ಆ ಸಭೆಗೆ ಸ್ಪಂದನೆ ಮಾಡಲಿಲ್ಲ, ಸಭೆಗೆ ಬರಲಿಲ್ಲ. ರೈತ ಪ್ರತಿನಿಧಿಗಳು ಬಂದರು, ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದರೂ ಕೂಡ ಎರಡೂ ಕಡೆಯಿಂದ ಸರಿಯಾದಂ-ಥ ಸ್ಪಂದನೆ ಆಗದೇ ಇದ್ದುದ್ದರಿಂದ ಸಮಸ್ಯೆ ಬಗೆಹರಿಯಲಿಲ್ಲ. ಸುಮಾರು ಒಂದು ತಿಂಗಳವರೆಗೆ ಮುಧೋಳ ನಗರದಲ್ಲಿ ರೈತರು ಪ್ರತಿಭಟನೆ ಮಾಡುವಂಥ ಸ್ಥಿತಿ ಬಂತು. ಕಬ್ಬು ಬೆಳೆ ನೀರಿಲ್ಲದೆ, ಕರೆಂಟ್ ಸರಿಯಾಗಿಲ್ಲದೆ ಒಂದು ಕಡೆ ಒಣಗಿ ಹೋಗುತ್ತಿತ್ತು. ಇನ್ನೊಂದು ಕಡೆ ಕಟಾವು ಮಾಡುವುದಕ್ಕೆ ಮಹಾರಾಷ್ಟ್ರದ ಗ್ಯಾಂಗ್ ಬಂದು ಲಕ್ಷಾಂತರ ರೂಪಾಯಿ ರೈತರು ತೊಡಗಿಸು-ವಂಥ ಸ್ಥಿತಿ ಕೂಡಾ ನಿರ್ಮಾಣ ಆಗಿತ್ತು. ಹೀಗಾಗಿ ಪೂಜ್ಯರ ಸಮ್ಮುಖದಲ್ಲಿ,

ಕೆಲವು ಸ್ವಾಮೀಜಿಯವರು ಮತ್ತು ಸಮಾಜದ ಮುಖಂಡರ ಸಮ್ಮುಖದಲ್ಲಿ ಒಂದು ಚರ್ಚೆಯಾಗಿ ಸುಮಾರು ರೂ.2350/-ಕ್ಕೆ ಕೊನೆಗೆ ನಿರ್ಣಯವಾಗಿ ಆ ಸತ್ಯಾಗ್ರಹ ಮುಕ್ತಾಯವಾಯಿತು ಮತ್ತು ಕಾರ್ಖಾನೆಗಳು ತಮ್ಮ ಕೆಲಸ ಪ್ರಾರಂಭ ಮಾಡಿವೆ. ಒಟ್ಟಾರೆ ನನಗೆ ಏನನ್ನಿಸುತ್ತದೆಯೆಂದರೆ ಒಂದು ದೃಷ್ಟಿಯಲ್ಲಿ ಒಂದು ಶಕ್ತಿ ಸತ್ಯಾಗ್ರಹ ಮಾಡಬೇಕು ಎಂದು ಹೊರಟಿದ್ದರೆ, ಇನ್ನೊಂದು ಶಕ್ತಿ ಅದಕ್ಕೆ ಸ್ಪಂದನೆ ಮಾಡದೇ ಇದ್ದುದರಿಂದ ಸಾಕಷ್ಟು ರೈತರು ತೊಂದರೆಯಲ್ಲಿ ಉಳಿಯುತ್ತಾರೆ. ಒಂದು ಕಡೆ ನಮಗೆ ಅನ್ನಿಸುತ್ತದೆ, ಕೆಲವು ಕಾರ್ಖಾನೆಯವರು ಸರಿಯಾಗಿ ಸ್ಪಂದನೆ ಮಾಡಿ ರೈತರ ಹಿತರಕ್ಷಣೆ ಮಾಡುವು-ದಕ್ಕೆ ಮುಂದೆ ಬಂದರೆ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಒಂದು ಕಡೆಗೆ ನಾವು ನೋಡುತ್ತಿರುತ್ತೇವೆ, ಗಲ್ಲಿ ಗಲ್ಲಿಗಳಲ್ಲಿ ನಾಯಿಗಳು ಅಡ್ಡಾಡುತ್ತಿರುತ್ತವೆ, ನಾಯಿಗಳು ತನ್ನ ಬಾಲ ಅಲುಗಾಡಿಸುತ್ತಿರುತ್ತವೆ. ಆದರೆ ಇಲ್ಲಿ ವ್ಯವಸ್ಥೆ ನೋಡಿದಾಗ ಬಾಲದ ಸುತ್ತ ನಾಯಿಗಳು ಅಲುಗಾಡುತ್ತಿವೆ ಎನ್ನುವ ಸಂಶಯ ನಮಗೆ ಬರುತ್ತದೆ. ಹೀಗಾಗಿ ಎರಡೂ ಭಾಗದಿಂದ ಸ್ಪಂದನೆ ಆಗದಿದ್ದರೆ, ರೈತರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಆಗುವುದಿಲ್ಲ. ಇವತ್ತು ವಿರೋಧ ಪಕ್ಷದ ನಾಯಕರು, ಇಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರು ಮನವಿ ಇಟ್ಟ ಹಾಗೆ State Advisory Price ಈ ವ್ಯವಸ್ಥೆ ಯಾವ ರೀತಿ ಮಹಾರಾಷ್ಟ್ರದಲ್ಲಿ, ಗುಜರಾತ್‌ನಲ್ಲಿ, ಉತ್ತರಪ್ರದೇಶದಲ್ಲಿ ಬಂದಿದೆ, ಅಲ್ಲಿ ಇವತ್ತು ರೂ.3000/-ಕ್ಕಿಂತ ಜಾಸ್ತಿ ದುಡ್ಡು ಕೊಡುತ್ತಾರೆ. ಉದಾಹರಣೆಗೆ ಗುಜ-ರಾತ್‌ನಲ್ಲಿ ಭವಾನಿ ಎನ್ನುವಂಥ ಸಹಕಾರಿ ಸಕ್ಕರೆ ಕಾರ್ಖಾನೆ ಇದೆ, ರೂ.-3600/-ಗಳನ್ನು ಒಂದು ಟನ್ ಕಬ್ಬಿಗೆ ಕೊಡುತ್ತಾರೆಂದರೆ ಗುಜ-ರಾತ್‌ನಲ್ಲಿ, ಉತ್ತರಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ ಸಾಧನೆ ಆಗುತ್ತದೆಯೆಂದರೆ ಕರ್ನಾಟಕದಲ್ಲಿ ಏಕೆ ಆಗುವುದಿಲ್ಲ. ಅತ್ಯಂತ ಶ್ರೇಷ್ಠವಾದಂಥ, ಉತ್ಕೃಷ್ಟವಾದಂಥ ೧೨% recovery ಆಗುವಂಥ ಕಬ್ಬು, ಈ ಭಾಗದಲ್ಲಿ ಬೆಳೆದಾಗ ಆ ಕಬ್ಬನ್ನು ಯಾವ ರೀತಿಯಿಂದ ನಾವು ಖರೀದಿ ಮಾಡಬೇಕು, ರೈತನಿಗೆ ಸರಿಯಾದ ಬೆಂಬಲ ಬೆಲೆ ಸಿಗಬೇಕು, ಯಾವುದೇ ಕಾರ್ಖಾನೆ lossನಲ್ಲಿ ಬರಬಾರದು. ಅವರು ಕೂಡಾ ಸುಗಮವಾಗಿ ತಮ್ಮ ವೃತ್ತಿಯನ್ನು ಮುಂದುವರೆಸಬೇಕು ಎನ್ನುವಂಥ ಹಿನ್ನೆಲೆಯಲ್ಲಿ ಚರ್ಚೆಯಾಗಬೇಕಾಗಿರುವುದು ಬಹಳ ಅಗತ್ಯವಿದೆ, ಹೀಗಾಗಿ ಇಲ್ಲಿ State Advisory Price ನೀತಿಯನ್ನು ಕರ್ನಾಟಕ ರಾಜ್ಯ

ಸರ್ಕಾರ adopt ಮಾಡಿದರೆ ರೈತರ ಹಿತರಕ್ಷಣೆ ಮಾಡುವುದಕ್ಕೆ ಆಗುತ್ತದೆ. ನಮ್ಮ ಹಿರಿಯ ಸದಸ್ಯರು ಹೇಳಿದಂತೆ ಮಹಾರಾಷ್ಟ್ರದಲ್ಲಿ ಕೂಡಾ tax exemption ಮಾಡಿದ್ದಾರೆ. ಈ ಭಾಗದ ರೈತರ ಹಿತರಕ್ಷಣೆ ಮಾಡಬೇಕು. ಬೀಜ, ಗೊಬ್ಬರ, ಲೇಬರ್ ಚಾರ್ಜ್ ಇತ್ಯಾದಿ ಎಲ್ಲವನ್ನು ಲೆಕ್ಕ ಹಾಕಿದರೆ ಬಹುಶ: ಯಾವುದೇ ರೈತ ಇನ್ನು ಕಬ್ಬು ಬೆಳೆಯನ್ನು ಹಾಕಬೇಕೋ, ಬೇಡವೋ ಎನ್ನುವಂಥ ಸ್ಥಿತಿಗೆ ಬರುತ್ತಾರೆ. ಹೀಗಾಗಿ ಇಲ್ಲಿಯೂ ಕೂಡಾ ಸಾಧ್ಯವಾದರೆ ನಮ್ಮ ಸರ್ಕಾರದಿಂದ ಮಹಾರಾಷ್ಟ್ರದಂತೆ tax exemption ಮಾಡಿ, ರೈತರ ಹಿತರಕ್ಷಣೆ ಮಾಡುವ ಹಿನ್ನೆಲೆಯಲ್ಲಿ ಚರ್ಚೆಗಳು ಆಗಬೇಕೆಂದು ನನಗೆ ಅನ್ನಿಸುತ್ತದೆ. ಇನ್ನೊಂದು ಬೇಡಿಕೆಯೇನೆಂದರೆ, levy ಮೂಲಕ ಉತ್ಪಾದನೆಯಾದಂಥ ಸಕ್ಕರೆಯಲ್ಲಿ ೧೦%ನ್ನು ಸರ್ಕಾರ ಖರೀದಿ ಮಾಡುತ್ತದೆ. ಮಾರುಕಟ್ಟೆಯಲ್ಲಿ ಯಾವ rate ಇದೆ ೫೦% rate ಕೊಡುವ ವ್ಯವಸ್ಥೆಯಿದೆ. ಆದರೆ, ಇದನ್ನು ಕೈಬಿಡಬೇಕೆಂದು ಒಂದು ಕಡೆ ಒತ್ತಾಯ ಬಂದರೂ ಕೂಡ ಸಾಮಾನ್ಯ ಮಧ್ಯಮ ವರ್ಗದ ಕಡುಬಡವರು ಪಡಿತರ ಮೂಲಕ ಸಕ್ಕರೆ ಖರೀದಿ ಮಾಡುವವರ ಕುಟುಂಬಕ್ಕೆ ಬೇಕು ಎನ್ನುವಂಥ ಹಿನ್ನೆಲೆಯಲ್ಲಿ ಬಡವರ ಹಿತರಕ್ಷಣೆ ಆಗಬೇಕು ಎನ್ನುವ ಹಿನ್ನೆಲೆಯಲ್ಲಿ 10% levy ಮೂಲಕ collect ಮಾಡುತ್ತಿರುವುದನ್ನು ಮುಂದುವರೆಸಬೇಕಾಗುತ್ತದೆ. ಹೀಗಾಗಿ ಒಟ್ಟು ಈ ಭಾಗದ ಇಡೀ ರಾಜ್ಯದ ಮತ್ತು ಅದರಲ್ಲೂ ವಿಶೇಷವಾಗಿ ಕಬ್ಬು ಬೆಳೆ-ಯುವಂಥ ಪ್ರದೇಶ ಅಂದರೆ ಬೆಳಗಾವಿ, ಬಿಜಾಪುರ, ಬಾಗಲಕೋಟೆ ಭಾಗದ ರೈತರ ಹಿತರಕ್ಷಣೆ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಆ ರೈತ ಪಟ್ಟಿರುವಂಥ ಶ್ರಮಕ್ಕೆ ಸರಿಯಾದ ಬೆಲೆ ಕೊಟ್ಟಾಗ ಮಾತ್ರ ಒಳ್ಳೆಯ ಭವಿಷ್ಯವಾಗುತ್ತದೆ. ಆದ್ದರಿಂದ State Advisory Priceನ್ನು ಘೋಷಣೆ ಮಾಡಿ ರೈತರ ಹಿತರಕ್ಷಣೆ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ನಾನು ವಿನಂತಿಯನ್ನು ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ):- ಸನ್ಮಾನ್ಯ ಉಪಸಭಾಧ್ಯಕ್ಷರೆ, ಬೆಳಗಾವಿ ನಗರವನ್ನು ಕುಂದಾ ನಗರಿ ಹಾಗೂ ಸಕ್ಕರೆ ನಾಡು ಎನ್ನುತ್ತಾರೆ. ಇಂಥ ನಗರದಲ್ಲಿ ಇವತ್ತು ಪ್ರಥಮ ಅಧಿವೇಶನವನ್ನು ನಡೆಸುತ್ತಿರುವ ಸಂದರ್ಭದಲ್ಲಿ ರಾಜ್ಯದ ಅದರಲ್ಲೂ ವಿಶೇಷವಾಗಿ ಈ ಭಾಗದ ರೈತರು ಬೆಳಗಾವಿ ಸುವರ್ಣಸೌಧದ ಎದುರುಗಡೆ ಉಪವಾಸ ಸತ್ಯಾಗ್ರಹ

ಮಾಡುತ್ತಿರುವುದನ್ನು ನೋಡಿದರೆ ಇವತ್ತು ಎಲ್ಲರೂ ಅದರ ಬಗ್ಗೆ ಲೆಕ್ಕ ಹಾಕುವಂಥ, ಚಿಂತನೆ ನಡೆಸಬೇಕಾದಂಥ ಒಂದು subject ಇದೆ. ಈಗ ಮಾನ್ಯ ವಿರೋಧಪಕ್ಷದ ನಾಯಕರು, ನಮ್ಮ ಪಕ್ಷದ ನಾಯಕರಾದ ಶ್ರೀ ರೇವಣ್ಣನವರು ಹಾಗೂ ಎಲ್ಲಾ ಹಿರಿಯ ಸದಸ್ಯರು ಈ ವಿಷಯದ ಕುರಿತು ಮಾತನಾಡಿದರು. ಪ್ರತಿ ವರ್ಷ ಫ್ಯಾಕ್ಟರಿಗಳು ಪ್ರಾರಂಭವಾಗುವುದಕ್ಕಿಂತ ಮೊದಲು ರೈತರು ಬೇಡಿಕೆ ಇಡುತ್ತಾರೆ. ಇವತ್ತು ನಿಜವಾಗಿಯೂ ರೈತರಿಗೆ ಬಹಳಷ್ಟು ಕಷ್ಟವಾಗುತ್ತಿದೆ. ಏಕೆಂದರೆ ನಾವು 10 ವರ್ಷಕ್ಕಿಂತ ಹಿಂದೆ ಹೋದರೆ ವರ್ಷಕ್ಕೆ ರೂ.15000/-ಕ್ಕೆ ಒಂದು ಆಳು ಸಿಗುತ್ತಿದ್ದರು. ಈಗ minimum ರೂ.50,000/- ಆಗಿದೆ. ಗೊಬ್ಬರ, DAP ರೂ.400/- ಇತ್ತು, ಇವತ್ತು ರೂ. 1200/- ಮತ್ತು ರೂ.1300/- ಆಗಿದೆ. ಎಲ್ಲಾ ಬೆಲೆಗಳು ಜಾಸ್ತಿಯಾಗಿದೆ. ಹಿಂದೆ ನಾನು ಕೃಷಿ ಸಚಿವನಾಗಿ ನಾನು ಕೆಲಸ ಮಾಡಿದ್ದೆನು. ಆದರೆ ಎಲ್ಲೋ ಒಂದು ಕಡೆ ಮೊದಲಿನಿಂದಲೂ ರೈತರು ವೈಜ್ಞಾನಿಕವಾಗಿ ಬೆಲೆ ನಿಗಧಿ ಮಾಡಬೇಕು ಎಂಬ ನಿಟ್ಟಿನಲ್ಲಿ ಕೂಗು ಎಲ್ಲಾ ಕಡೆಯೂ ಇದೆ. ಅದಕ್ಕೆ ನಾವು ಹಿಂದೆ ಕೃಷಿ ನೀತಿ ತಂದಾಗ, ಕೇಂದ್ರ ಸರ್ಕಾರ ಡಾ:ಸ್ವಾಮಿನಾಥನ್ ಕಮೀಷನ್ ಕೂಡಿಸಿ ಇಲ್ಲೇ ನಮ್ಮ ನಾಡಗೌಡರು ಇದ್ದಾರೆ, ಅವರು ರಾಯಚೂರಿನಲ್ಲಿ ಭತ್ತದ ಸಮಸ್ಯೆ ಬಂದಾಗ ಅವರು ಇದೇ ರೀತಿ ಎಕರೆಗೆ ಎಷ್ಟೆಷ್ಟು ಆಗುತ್ತದೆ ಎಂದು ನಿರ್ಣಯ ಮಾಡಿದ್ದರು. 30 ಟನ್ ಕಬ್ಬಿಗೆ ಎಕರೆಗೆ ಸುಮಾರು ರೂ. 2715/-ರಿಂದ ಹಿಡಿದು ರೂ. 3150 ಖರ್ಚು ಆಗುತ್ತದೆ.

ಹಾಗಾಗಿ ಇವತ್ತು ರಾಜ್ಯದಲ್ಲಿ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಬೇಕು. ಡಾ: ಸ್ವಾಮಿನಾಥನ್ ಕಮೀಷನ್ ರಿಪೋರ್ಟ್ ಈಗ already ಕೇಂದ್ರ ಸರ್ಕಾರದಲ್ಲಿದೆ. ಇವತ್ತು ನಮ್ಮ ರಾಜ್ಯ ಸರ್ಕಾರದಿಂದ ನಾವು ಒಮ್ಮತದಿಂದ ನಿರ್ಣಯವೊಂದನ್ನು ಮಾಡೋಣ. ಇವತ್ತು ಕೇಂದ್ರ ಸರ್ಕಾರ-ದವರು ಡಾ : ಸ್ವಾಮಿನಾಥನ್ ಕಮೀಷನ್ ರಿಪೋರ್ಟ್ ಅನ್ನು accept ಮಾಡಬಹುದು. ಅದು ಏನು ಹೇಳುತ್ತದೆ ಎಂದರೆ, ನಮಗೆ ಎಷ್ಟು ಖರ್ಚಾಗುತ್ತ-ದೋ, ಅದರ ಮೇಲೆ 50% profit ಹಾಕಿ ಇವತ್ತು ಬೆಲೆ ನಿಗದಿ ಮಾಡಬೇಕು. Suppose ಈಗ ೩ ಸಾವಿರ ರೂ.ಗಳ ಬೆಲೆ ಇದೆ ಎಂದಿಟ್ಟುಕೊಂಡರೆ, ಆ 3 ಸಾವಿರ ರೂ.ಗಳ ಮೇಲೆ ಮತ್ತೆ 1500 ರೂ.ಗಳ-ನ್ನು ಹಾಕಬೇಕು. ಎಲ್ಲಾ

ಸೇರಿ 4,500 ರೂ.ಗಳ ಬೆಲೆಯನ್ನು fix ಮಾಡಬೇಕು. ಬಹಳ ದಿವಸಗಳಿಂದ ರೈತರು ಇದಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಎಲ್ಲೋ ಒಂದು ಹಂತದಲ್ಲಿ ಇದು ಜಾರಿಯಾಗಲೇಬೇಕು. ಇವರು 2500 ರೂ.ಗಳ field price ಅನ್ನು ಕೊಡುತ್ತೇವೆಂದು ಹೇಳುತ್ತಾರೆ. ಈಗ ನಮ್ಮ ಬೀದರ್‌ನಲ್ಲಿ start ಆಗಿದೆ. ಅಲ್ಲಿ 2200 ರೂ.ಗ-ಳನ್ನು ಸದ್ಯಕ್ಕೆ ಕೊಡುತ್ತಿದ್ದಾರೆ. ಆದರೆ ಇಲ್ಲಿ ಕೆಲವು area ದಲ್ಲಿ yield ಅಂದರೆ, ಸಕ್ಕರೆ percentage 12-12.5 ಬರುತ್ತದೆ. ಆದರೆ ನಮ್ಮ ಕಡೆ 10-10.5 ಬರುತ್ತದೆ. ಅದೇ ನಾವು ಮಂಡ್ಯದ ಕಡೆಗೆ ಹೋದರೆ, ಅದು ಕಡಿಮೆಯಾಗುತ್ತದೆ. ಅದು ಅಲ್ಲಿ 9-9.5 ಆಗುತ್ತದೆ. ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ಇವರು ಇನ್ನೂ ಹೆಚ್ಚಿಗೆ ಕೊಡಬಹುದು. ಆಮೇಲೆ ನಮ್ಮಲ್ಲಿ ಇನ್ನೂ ಹೆಚ್ಚಿಗೆ ಕೊಡುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಹಾಗಾಗಿ ಸರ್ಕಾರದವರಿಗೆ, ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಲಿಕ್ಕೆ ಬಯಸುತ್ತೇನೆ. ಹಿಂದೆ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಬಹಳಷ್ಟು ರೈತರು ಹೆಚ್ಚಾ-ಗಿ ಕಬ್ಬು ಬೆಳೆದು ಸಮಸ್ಯೆ ಉಂಟಾಗಿತ್ತು. ಎಷ್ಟೋ ಜನ ರೈತರು ನಮ್ಮ ಬೆಳೆಯೆಲ್ಲಾ ಈ ಸಲ ಹೊಲದಲ್ಲೇ ಉಳಿದು, ಅದು ಈ ಸಲ ಕಟಾವೇ ಆಗುವು-ದಿಲ್ಲ ಎನ್ನುವಂತಹ ನಿರೀಕ್ಷೆಯಲ್ಲಿ ಇದ್ದರು. ಈ ರೀತಿ ಬಹಳಷ್ಟು ಸಮಸ್ಯೆಗಳಾ-ದಾಗ, ೨-೩ ರೀತಿಯಲ್ಲಿ ಸಮಸ್ಯೆ ಬಗೆಹರಿಸಲಾಯಿತು. ಯಾರ ಕಬ್ಬು ಹೋಗಿ ರಲಿಲ್ಲವೋ, ಅವರಿಗೆ ಹೆಕ್ಟೇರ್‌ಗೆ ೨೫ ಸಾವಿರ ರೂ.ಗಳನ್ನು announce ಮಾಡಲಾಯಿತು. . ಆಮೇಲೆ, transport subsidy ಆಗಿ ಒಂದು ಟನ್‌ಗೆ 100 ರೂ.ಗಳನ್ನು ಕೊಡಲಾಯಿತು. ಹೀಗಾಗಿ totally, 270 ಕೋಟಿ ರೂ.ಗಳನ್ನು ಆ ವರ್ಷ ಕಬ್ಬು ಬೆಳೆದ ರೈತರಿಗೆ ಕೊಟ್ಟಂತಹ ನಿದರ್ಶನವಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು, ಈಗ ಮಾನ್ಯ ನಿರಾಣಿಯವರು ಹೇಳಿದಂತೆ, co-operative sugar factories share holders, owners, directors ಎಲ್ಲಾ ಅವರೇ ಆಗಿದ್ದಾರೆ. ಈಗ ಅವರು legally ಮಾಡಿದರೆ, private ನವರು ಹೇಗೋ ಅವರ ಜೊತೆಗೆ ಹೋಗಲೇಬೇಕಾಗುತ್ತದೆ. ಬೇರೆ ಮಾತೇ ಇಲ್ಲ. ಅದಕ್ಕಾಗಿ ತಾವು ಅವರನ್ನು ಕರೆಸಿ, ನಿರ್ದಿಷ್ಟವಾಗಿ ಇಷ್ಟು ಬೆಲೆಯನ್ನು ಕೊಡಲೇಬೇಕು ಎನ್ನುವಂತಹ ನಿಟ್ಟಿನಲ್ಲಿ ಮಾಡಬೇಕು.

ಅಕಸ್ಮಾತ್ ಅವರಿಗೆ ಏನಾದರೂ ತೊಂದರೆಯಾದರೆ, ಸರ್ಕಾರ-ದಿಂದ ಭರಿಸಬಹುದು. ಏಕೆಂದರೆ, ಹಿಂದೆ ಕೆಲವು ಕಡೆ ಸರ್ಕಾರವೇ ಕೊಟ್ಟಿತ್ತು. ಇವತ್ತು ಇನ್ನೂ ಒಂದು ಕಡೆ ನಾವು ಎಡವುತ್ತಿದ್ದೇವೆ. ಈಗ ಬೀದರ್ ಸೇರಿದಂತೆ ನಮ್ಮಲ್ಲಿ ಎಲ್ಲಾ ಕಡೆಗಳಲ್ಲಿ ಒಂದು ಎಕರೆಗೆ ಇಳುವರಿ 25-30 ಟನ್ ದಾಟುವುದಿಲ್ಲ. ಆದರೆ ಇಲ್ಲಿ ಸ್ವಲ್ಪ ಇಳುವರಿ ಜಾಸ್ತಿ ಇದೆ. ಈ ಕಡೆಗೆ ಎಕರೆಗೆ ೪೦ ಟನ್‌ವರೆಗೆ ಬೆಳೆಯುತ್ತಾರೆ. ಈ ಕಡೆಗೆ ನೀರಾವರಿ ಸ್ವಲ್ಪ ಚೆನ್ನಾಗಿದೆ. ನಮ್ಮ Agriculture department ನಿಂದ ರೈತರಿಗೆ supportive ಆಗಿ, ಅವರ ಇಳುವರಿಯನ್ನು ಸ್ವಲ್ಪ ಹೆಚ್ಚಿಗೆ ಮಾಡುವಂತಹ ಪ್ರಯತ್ನವನ್ನು ನಾವು ಯಾವತ್ತೂ ಮಾಡುತ್ತಿಲ್ಲ. ಹಲವಾರು ಕಡೆಗಳಲ್ಲಿ, seminars, workshops ನಡೆಸಿ minimum ಒಂದು ಎಕರೆಗೆ 60-70 ಟನ್‌ವರೆಗೆ ರೈತರು ಕಬ್ಬು ಬೆಳೆಯುವಂತೆ ಮಾಡಬಹುದು. 30 ಟನ್ ಬೆಳೆಯಲು ನಮಗೆ ೩೦೦೦ ರೂ.ಗಳ ಖರ್ಚು ಬಂದಿದ್ದರೆ, 60 ಟನ್ ಬೆಳೆದಿದ್ದರೆ, ಅದರ ೫೦% ಖರ್ಚಾಗು-ತ್ತದೆ. ಆ ನಿಟ್ಟಿನಲ್ಲಿ ಸರ್ಕಾರವೇ ಮುತುವರ್ಜಿ ವಹಿಸಬೇಕು. ಏಕೆಂದರೆ, ರೈತರು ಪಾಪ! ತಮ್ಮ systemನಲ್ಲಿ ತಮ್ಮ ಪಾಡಿಗೆ ತಾವು ಏನೋ ಒಂದು ರೀತಿಯಲ್ಲಿ ಬೆಳೆಯುತ್ತಾ ಬರುತ್ತಿದ್ದಾರೆ. ಹಿಂದೆ agriculture policy ಯಲ್ಲಿ ನಾವು ಹೇಳಿದ್ದೇವೆ. ಪಂಚಾಯಿತಿಗೊಂದು project ಮಾಡುತ್ತೇವೆ, ಅಲ್ಲೊಂದು ಪ್ರಾಯೋಗಿಕವಾಗಿ ೨ ಎಕರೆ ಜಮೀನಿನಲ್ಲಿ ಬೆಳೆಯುತ್ತೇವೆ ಎಂದು ಹೇಳಿದ್ದೇವೆ. ನಮ್ಮ agriculture departmentನವರು ಆ ಪಂಚಾಯಿತಿಗೆ ಹೋಗಿ ಒಂದೆರಡು ಎಕರೆ ಜಮೀನಿನಲ್ಲಿ 60-70 ಟನ್‌ಗಳಷ್ಟು ಬೆಳೆಸಿದ್ದರೆ, ಪಕ್ಕದ ಜಮೀನಿನಲ್ಲಿ ಬೆಳೆಯುವವರಿಗೂ ಧೈರ್ಯ ಬರುತ್ತದೆ. ನಾನೂ ಈ systemನಲ್ಲಿ ಬೆಳೆಯಬೇಕು ಎಂದು ಅನಿಸುತ್ತದೆ. ಎಲ್ಲೋ ಒಂದು ಕಡೆ, agriculture policy ಯಲ್ಲಿ ಅದು ಇದೆ. ಅದನ್ನು ನೀವು ಏನು ಮಾಡಿದ್ದೀರೋ ಗೊತ್ತಿಲ್ಲ. Cabinet ನಲ್ಲಿ approval ಮಾಡಿಸಿ, ನಮ್ಮ policyಯಲ್ಲಿ ಅದನ್ನು ಅಳವಡಿಸಿದ್ದೇವೆ. ಅದನ್ನು ಸ್ವಲ್ಪ ತಾವು ತೆಗೆದು ನೋಡಿ. ಇವತ್ತು ರಾಜ್ಯದ ರೈತರು ಯಾವ ನಿಟ್ಟಿನಲ್ಲಿ ಹೋಗಬೇಕು ಎನ್ನುವುದನ್ನು ತಾವು ಸ್ವಲ್ಪ ಹೇಳಬೇಕು. ಇನ್ನು ಕಾವೇರಿ ನೀರಿನ issue

ಬಗ್ಗೆ ಹೇಳುವುದಾದರೆ, ನಾವು ಅದನ್ನು ಎಷ್ಟೊಂದು ದೊಡ್ಡದಾಗಿ ಮಾಡುತ್ತಿದ್ದೇವೆ. ನಾನು ಇದ್ದಾಗ, ಇಡೀ ರಾಜ್ಯದ ರೈತರು ಭತ್ತ ಮತ್ತು Sugarcane ಎರಡು ಬೆಳೆ ಬೆಳೆಯುತ್ತಿದ್ದರು. ನಾಲ್ಕು ವರ್ಷದ ಮೊದಲು ನಾವಿದ್ದಾಗ ೩ ಲಕ್ಷ ೭೫ ಸಾವಿರ ಹೆಕ್ಟೇರ್‌ಗಳಷ್ಟು ಪ್ರದೇಶದಲ್ಲಿ sugarcane ಬೆಳೆಯುತ್ತಿದ್ದರು. ಇವತ್ತು ಇಡೀ ಕರ್ನಾಟಕದಲ್ಲಿ sugar cane ಬೆಳೆಯಲು ನಾವು ಸಂಪೂರ್ಣವಾಗಿ drip irrigation ಮಾಡಿದರೆ, ೨ KRS ಡ್ಯಾಂ ಸಾಮರ್ಥ್ಯದಷ್ಟು ನೀರು ನಮ್ಮ ಭೂಮಿಯಿಂದ ಉಳಿಯುತ್ತದೆ. ಆದರೆ ಇವತ್ತು ನಾವು ಎಲ್ಲಿದ್ದೇವೆ? ನಾನು ಆ ಸ್ಕೀಮ್ ಇವತ್ತು ಗುಜರಾತ್‌ಗೆ ಹೋಗಿ ನೋಡಿಕೊಂಡು ಬಂದೆ. ಮಾನ್ಯ ಮುಖ್ಯಮಂತ್ರಿಗಳೆ, ಅಲ್ಲಿ ವರ್ಷಕ್ಕೆ ೧೨೦೦ ಕೋಟಿ ರೂ.ಗಳನ್ನು drip irrigation ಗೆ use ಮಾಡುತ್ತಿದ್ದರು. ನಮ್ಮಲ್ಲಿ ೩-೫ ಕೋಟಿ ರೂ.ಗಳಷ್ಟು ಇತ್ತು, ಅದನ್ನು ನಾವು ಬಂದಾಗ ಒಂದೇ ವರ್ಷಕ್ಕೆ ೧೨೦ ಕೋಟಿ ರೂ.ಗಳಿಗೆ jump ಮಾಡಿಸಿದೆವು. ಈ ನಿಟ್ಟಿನಲ್ಲಿ ಅದನ್ನು ನಮ್ಮ ರೈತರಿಗೆ ಒಯ್ಯುವಂತಹ ಕೆಲಸವನ್ನು ಸರ್ಕಾರದವರು ಮಾಡಬೇಕಾಗುತ್ತದೆ. ಇವತ್ತೇನು ಇವರು 3000 ರೂ.ಗಳನ್ನೇನು ಇಲ್ಲಿ ಕೇಳುತ್ತಿದ್ದಾರೋ, ಅದರಲ್ಲಿ ತಪ್ಪೇನಿಲ್ಲ. ಏಕೆಂದರೆ, ನಮಗೆ ಖರ್ಚುಗಳು ಅಷ್ಟೊಂದು ಜಾಸ್ತಿ ಇವೆ. ಹಾಗಾಗಿ ಇವತ್ತು ಸರ್ಕಾರದವರು agriculture department ನವರಿಗೆ ಈ ಬಗ್ಗೆ ಹೇಳಬೇಕು. ಹಿಂದೆ ಮಾಡಿರುವ ಕೃಷಿ ನೀತಿಯನ್ನು ತಾವು ತೆಗೆದು ನೋಡಿ. ಒಂದೊಂದು ಪಂಚಾಯಿತಿಯಲ್ಲಿ ಒಂದೊಂದು demonstration plot ಎಂದೇನು ನಾವು ಹೇಳಿದ್ದೇವೋ, ಆ demonstration plot ನಲ್ಲಿ ಯಾವ ರೀತಿ ಬೆಳೆಯಬೇಕು ಎಂದು ನಮ್ಮ agricultural scientists ಅಲ್ಲಿದ್ದು ಕೆಲಸ ಮಾಡಲಿ. ಆಗ ಇಳುವರಿ ಹೆಚ್ಚಾಗುತ್ತದೆ ಮತ್ತು cost of production ಕಡಿಮೆ ಬರುತ್ತದೆ. ಅದಕ್ಕೆ ತಾವು supportive ಆಗಿ ಯಾವ್ಯಾವ ಹಂತದಲ್ಲಿ ಇಡಬೇಕೋ, ಆ ಹಂತದಲ್ಲಿ ಇಡಬೇಕು. ಹಾಗಾಗಿ ದಯವಿಟ್ಟು ತಮ್ಮ ಮುಖಾಂತರ ನಾನು ಮುಖ್ಯಮಂತ್ರಿಗಳಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ಅವರು ಇಷ್ಟು ಕೊಡುವುದು, ಇವರು ಇಷ್ಟು ಕೊಡುವುದು ಎಂದೇನು ಗೊಂದಲ ಉಂಟಾಗುತ್ತಿದೆಯೋ, ಇದನ್ನು ಬಗೆಹರಿಸಿ. ತಾವು

ಎಲ್ಲಾ co-operative sugar factories ನವರನ್ನು ಕರೆಸಿ. ಅವರಿಗೆ ಎಷ್ಟು ಲಾಭ ಆಗುತ್ತದೆ ಎಂಬುದನ್ನು ನೋಡಿ. ಅವರಿಗೆ ಕೊಡಲಿಕ್ಕೆ ಆಗದಿದ್ದರೆ, ಸರ್ಕಾರದ ಕೈಯಿಂದ 100-300 ರೂ.ಗಳವರೆಗೆ ಅದಕ್ಕೆ ಬೆಂಬಲ ಬೆಲೆಯನ್ನು ಕೊಡಿಸಿ. ವಿಶೇಷವಾಗಿ ಮಹಾರಾಷ್ಟ್ರದಲ್ಲಿ 75 ರೂ.ಗಳ purchase tax ತೆಗೆದುಕೊಳ್ಳುವುದಕ್ಕೆ full reduction ಇದೆ. ಆದರೆ ನಮ್ಮಲ್ಲಿ ಅದನ್ನು ತೆಗೆದುಕೊಳ್ಳುತ್ತಾರೆ. ಹಾಗಾಗಿ ಅದನ್ನೂ ಕೂಡ ಮಹಾ-ರಾಷ್ಟ್ರ type ನಲ್ಲಿ ಮಾಡಿಕೊಟ್ಟರೆ, ಅದರಿಂದಲೂ ಒಳ್ಳೆಯದಾಗುತ್ತದೆ. ಇನ್ನು ನಮ್ಮ ಕಡೆಯಿಂದ ಕೇಂದ್ರ ಸರ್ಕಾರಕ್ಕೆ ಒಂದು single resolution ಮಾಡಿ, ಡಾ:ಸ್ವಾಮಿನಾಥನ್ ಕಮೀಷನ್ approval ಆಗುವಂತೆ ಮಾಡಿಸಬೇಕು. ಮುಂದಿನ ದಿನಗಳಲ್ಲಿ ಅದರಿಂದ ಒಳ್ಳೆಯದಾಗುತ್ತದೆ ಎಂಬ ನಿಟ್ಟಿನಲ್ಲಿ ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಮಧ್ಯಪ್ರವೇಶಿಸಿ, ಆ ರೈತರ ಪರವಾಗಿ ಹೆಚ್ಚಿನ ಬೆಲೆಯನ್ನು ಕೊಡಿಸುವಂತಹ ಪ್ರಯತ್ನವನ್ನು ಮಾಡಬೇಕು. ಉಳಿದ ಕೆಲವು ಅಂಶಗಳ ಬಗ್ಗೆ ರೈತರ ಪರವಾಗಿ ಮುಂದಿನ ದಿನಗಳಲ್ಲಿ ತಾವು ನಿರ್ಣಯ ಮಾಡಬೇಕು. ತಾವು ಸ್ವಲ್ಪ ಕೃಷಿ ನೀತಿಯನ್ನು ತೆಗೆದು ನೋಡಿ, ಅದರಲ್ಲಿ ಎಷ್ಟು ಜಾರಿಗೆ ತರಲು ಸಾಧ್ಯವೋ, ಅಷ್ಟನ್ನು ಜಾರಿಗೆ ತರಲು ಸಾಧ್ಯವನ್ನಾಗಿಸುವ ನಿಟ್ಟಿನಲ್ಲಿ ತಾವು ಗಮನ ಹರಿಸಬೇಕೆಂದು ನಾನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್ [ಆಳಂದ] :– ಮಾನ್ಯ ಅಧ್ಯಕ್ಷರೆ, ರೈತರು ಕಬ್ಬಿಗೆ ಒಳ್ಳೆಯ ಬೆಲೆ ಸಿಗಬೇಕೆನ್ನುವ ದೃಷ್ಟಿಯಿಂದ ಇವತ್ತು ಸುವರ್ಣ ಸೌಧದ ಎದುರು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇವತ್ತು ಗುಲ್ಬರ್ಗಾ ಜಿಲ್ಲಾ ಆಳಂದ ತಾಲ್ಲೂಕಿನಲ್ಲಿ ಒಂದು co-operative factory, ಅದು ಸರಿಯಾಗಿ ನಡೆಯದ ಕಾರಣ, private ನವರಿಗೆ ಅದನ್ನು ಲೀಸ್ ಮೇಲೆ ಕೊಟ್ಟಿದ್ದಾರೆ. ಅವರು ಹಳೆಯ ಫ್ಯಾಕ್ಟರಿ ಬಿಟ್ಟು, ಒಂದು ಒಳ್ಳೆಯ ಹೊಸ ದೊಡ್ಡದಾದ ಫ್ಯಾಕ್ಟರಿಯೊಂದನ್ನು ಹಾಕಿ, ಅದನ್ನು ಸರಿಯಾಗಿ ನಡೆಸುತ್ತಿದ್ದಾರೆ. ಅದರಿಂದ ರೈತರಿಗೆ ಅನುಕೂಲವಾಗಿದೆ. ಆದರೆ ಇನ್ನೂ ಅದಕ್ಕೆ ರೇಟ್ ಅನ್ನು ಅವರು ಫಿಕ್ಸ್ ಮಾಡಿಲ್ಲ. ಈ ಬಗ್ಗೆ ರೈತರು ಹೋಗಿ ಕೇಳಿದರೆ, ಬೇರೆಯವರು ಏನು ಕೊಡುತ್ತಾರೋ, ಅದರಂತೆ ನಾವೂ ಕೊಡುತ್ತೇವೆ. ಅಲ್ಲದೆ ಸರ್ಕಾರದವರು

ಏನು fix ಮಾಡುತ್ತದೋ, ಅದನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಸರ್ಕಾರದವರನ್ನು ನಾವು ಕೇಳುವುದೇನೆಂದರೆ, ನೀವು ರೈತರಿಗೆ ಆದಷ್ಟು ಬೇಗ ಬೆಲೆ ನಿಗದಿ ಮಾಡಬೇಕು. ಇವತ್ತು ನಮ್ಮ ಕಡೆ ಗುಲ್ಬರ್ಗಾ ಜಿಲ್ಲೆಯಲ್ಲಿ ಬೇರೆ ಬೆಳೆಗಳು ಯಾವುವೂ ಇಲ್ಲ. ಮಳೆ ಕಡಿಮೆಯಾಗಿರುವುದ-ರಿಂದ, ರೈತರಿಗೆ ಬೇರೆ ಬೆಳೆ ಬೆಳೆಯಲಿಕ್ಕಾಗಿಲ್ಲ. ತೊಗರಿ, ಎಳ್ಳು ಮುಂತಾದ ಬಹಳಷ್ಟು ಮುಂಗಾರಿ ಮತ್ತು ಹಿಂಗಾರಿ ಬೆಳೆಗಳು fail ಆಗಿವೆ, ಇಳುವರಿ ಬಹಳ ಕಡಿಮೆ ಬಂದಿವೆ. ಒಂದಷ್ಟು ಕಬ್ಬು ಬೆಳೆದಿದ್ದಾರೆ. ಇವತ್ತು ಕಬ್ಬು ಬೆಳೆದ ರೈತರಿಗೆ ಒಂದು ಒಳ್ಳೆಯ ಬೆಲೆ ಸಿಗಬೇಕು. ಈಗ ರೈತರು ಎಲ್ಲರೂ ಕೂಡ ಈಗ factory ಚಾಲೂ ಮಾಡಿದ್ದಾರೆ. ಏನಾದರೂ ಒಂದು fix ಮಾಡಿ ಕೊಡಿ ಎಂದು ಎಲ್ಲರೂ ನೋಡುತ್ತಿದ್ದಾರೆ. ನಮ್ಮ ಕಳಕಳಿ ಅಥವಾ ವಿನಂತಿ ಏನೆಂದರೆ, ಈಗ ಮಾನ್ಯ ನಿರಾಣಿಯವರು ಹೇಳಿದಂತೆ, 3000-3500 ರೂ.ಗಳವರೆಗೂ ನಾವು ಕೊಡುತ್ತೇವೆಂದು ಇಲ್ಲಿ ಘೋಷಣೆ ಮಾಡಿದ್ದಾರೆ. ಆದರೆ ನಮ್ಮಲ್ಲಿ ಇನ್ನೂ ಘೋಷಣೆ ಆಗಿಲ್ಲ. ಪಕ್ಕದಲ್ಲೇ ಮಹಾರಾಷ್ಟ್ರ ಬಾರ್ಡರ್ ಇದೆ, ಅವರು 2200 ರೂ.ಗಳವರೆಗೆ ಕೊಡುತ್ತೇ-ವೆಂದು ಘೋಷಣೆ ಮಾಡಿದ್ದಾರೆ. ಇವತ್ತು ರೈತರು ಆತಂಕದಲ್ಲಿದ್ದಾರೆ. ಇವತ್ತು ಡೀಸೆಲ್ ಬೆಲೆ ಜಾಸ್ತಿಯಾಗಿದೆ, ಕರೆಂಟ್ ಜಾಸ್ತಿಯಾಗಿದೆ, ಗೊಬ್ಬರ ಜಾಸ್ತಿ-ಯಾಗಿದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇವತ್ತು ಕಬ್ಬು ಬೆಳೆದಂತಹ ಬೆಳೆಗಾರರಿಗೆ ಬೆಲೆ ನಿಗದಿಪಡಿಸಬೇಕು. ಏಕೆಂದರೆ, ಮುಂದೆ ಕಬ್ಬು ನಮ್ಮಲ್ಲಿ ಇರುವುದಿಲ್ಲ. ಏಕೆಂದರೆ, ಅಮರ್ಜಾ ಡ್ಯಾಮ್‌ವೊಂದಿದೆ. ಆ ಡ್ಯಾಮ್ ಈ ವರ್ಷ ತುಂಬಿಲ್ಲ. ನಮ್ಮ ಗುಲ್ಬರ್ಗಾ ಡಿ.ಸಿ. ಸಾಹೇಬರು ಗುಲ್ಬರ್ಗಾಕ್ಕೆ ಕುಡಿಯುವ ನೀರಿಗೆ ಕಡಿಮೆಯಾಗುತ್ತದೆಂದು ಆ ಡ್ಯಾಮ್‌ನಿಂದ ನೀರನ್ನೆಲ್ಲಾ ಬೆಳೆಗಳಿಗೆ ಬಿಡಿಸುತ್ತಿಲ್ಲ.

ಆ ಹಿನ್ನೆಲೆಯಲ್ಲಿ ಕಬ್ಬು ಬೆಳೆದಂತಹ ರೈತರ ಕಬ್ಬು ಒಣಗಿ ಹೋಗಿದೆ. ಡ್ಯಾಂ ಕೆಳಗೆ ಇದ್ದ ಕಬ್ಬು ಅದೂ ಕೂಡ ನೀರು ಇಲ್ಲದೆ ಒಣಗಿ ಹೋಗು-ತ್ತಿದೆ. ಅವರು ಬಹಳ ಸಂಕಷ್ಟದಲ್ಲಿದ್ದಾರೆ. ಅವರಿಗೆ ನೀವು ಹೇಳಿದ ಹಾಗೆ ೩೦೦೦ ರೂ. ಬೆಂಬಲ ಬೆಲೆ ನೀಡಬೇಕು ಇಲ್ಲವೆಂದರೆ ಸರ್ಕಾರದಿಂದ ಬೆಂಬಲ ಬೆಲೆ ಘೋಷಣೆ ಮಾಡಿ ಕಬ್ಬು ಬೆಳೆದಂತಹ ರೈತರಿಗೆ ಒಳ್ಳೆಯ ಬೆಲೆ ಕೊಡಬೇಕೆಂದು ನಾನು ಕೂಡ ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದು ಸವದಿ: (ಸರ್ಕಾರಿ ಮುಖ್ಯ ಸಚೇತಕರು) (ತೇರದಾಳ):- ಮಾನ್ಯ ಉಪಾಧ್ಯಕ್ಷರೆ, ಉತ್ತರ ಕನ್ನಡ, ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ರೈತರ ಮುಖ್ಯ ಬೆಳೆ ಎಂದರೆ ಕಬ್ಬು ಬೆಳೆ. ಸುಮಾರು ವರ್ಷ-ಗಳಿಂದ ಅನೇಕ ರೈತ ಸಂಘಗಳು, ಕಬ್ಬು ಬೆಳೆಗಾರರ ಸಂಘಗಳು ಬಹಳಷ್ಟು ಹೋರಾಟಗಳನ್ನು ನಡೆಸುತ್ತಿರುವ ಸಂಗತಿ ಸರ್ಕಾರದ ಗಮನದಲ್ಲಿದೆ. ಎಷ್ಟು ಹೋರಾಟಗಳು ನಡೆದರೂ ಸಹಿತ ಕೊನೆಗೆ ಅದರ ನಷ್ಟ ರೈತರಿಗೇ ಆಗುತ್ತಾ ಬಂದಿದೆ. ಆ ಕಾರಣಕ್ಕಾಗಿ ವಿಶೇಷವಾಗಿ ಸರ್ಕಾರ ಇದರ ಬಗ್ಗೆಗಮನ ಹರಿಸಿ ಯಾವುದಾದರೂ ಒಂದು ಶಾಶ್ವತ ಪರಿಹಾರ ಕಂಡುಹಿಡಿಯುವಂತಹ ಕೆಲಸ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಉದಾಹರಣೆಗಾಗಿ ಸಕ್ಕರೆ ಬೆಲೆ ಪ್ರತಿ ವರ್ಷ ನಿಶ್ಚಿತ ಬೆಲೆ ಇರುವುದಿಲ್ಲ. ಸಕ್ಕರೆ ಬೆಲೆಗೆ ಅನುಗುಣವಾಗಿ ಕಬ್ಬಿನ ಬೆಲೆ ಕೊಡುವಂತಹ ಕೆಲಸವನ್ನು ಕಾರ್ಖಾನೆ-ಗಳು ಮಾಡುತ್ತವೆ. ಅದನ್ನಾದರೂ ಸಹಿತ ಬೇರೆ ಬೇರೆ ರಾಜ್ಯಗಳಲ್ಲಿ ಏನು SAP ರೇಟ್ ಏನು ಜಾರಿಗೆ ತಂದಿದ್ದಾರೆ ಅದನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರುವಂತೆ ನಮ್ಮ ರೈತರ ಬೇಡಿಕೆ ಇದೆ. ಈ ವರ್ಷ ಅವರು ಒಟ್ಟು ಎಷ್ಟು ಉತ್ಪಾದನೆ ಮಾಡಿರುತ್ತಾರೆ ಅದರ ಕೊನೆಯ ಚೀಲ ಮಾರುವವರೆಗೆ ಅದರ average ತೆಗೆದು ಇಷ್ಟು ಸಕ್ಕರೆ ರೇಟ್ ಇದ್ದರೆ ಇಷ್ಟು ಕಬ್ಬಿನ ಬೆಲೆ ಕೊಡಬೇಕೆಂದು ಒಂದು ಪರಿಣಿತರ ತಂಡ ನಿರ್ಮಾಣ ಮಾಡಿ ಅದನ್ನು ಅಧ್ಯಯನ ಮಾಡಿ ಅದನ್ನು ಫೈನಲ್ ಮಾಡಿದರೆ ಪ್ರತಿ ವರ್ಷ ಕಾರ್ಖಾನೆ ಮತ್ತು ರೈತರಿಗೆ ಏನು ಜಗಳ ಇದೆ, ಹೋರಾಟ ಇದೆ ಅದು ನಿಲ್ಲುತ್ತದೆ. ನಾವು ಇದನ್ನು ಕಾಯ್ದಿಟ್ಟುಕೊಳ್ಳದಿದ್ದರೆ ನಿರಂತರ ಹೋರಾಟ ನಡೆಯುತ್ತದೆ. ಎಲ್ಲಾ ನಷ್ಟವನ್ನು ರೈತರೇ ಹೊರಬೇಕಾಗುತ್ತದೆ. ಸುಮಾರು ಒಂದು ಅಥವಾ ಎರಡು ತಿಂಗಳು ಕಾರ್ಖಾನೆಗಳು ಬಂದ್ ಆದವು ಎಂದರೆ, ಅದರ ನಷ್ಟವನ್ನು ಕಾರ್ಖಾನೆಯವರು ಹೊರುವುದಿಲ್ಲ. ಅದು ಕೊನೆಗೆ ರೈತರ ಮೇಲೆ ಬೀಳುವ ಸಂದರ್ಭ ಇದೆ. ಆ ಕಾರಣಕ್ಕಾಗಿ ಬಹಳ ನಿಖರ ಹೋರಾಟ ಆ ಭಾಗದಲ್ಲಿ ನಡೆಯುತ್ತಿದೆ. ಆ ಕಾರಣಕ್ಕಾಗಿ ಸರ್ಕಾರ ಮನಸ್ಸು ಮಾಡಿ ಇದಕ್ಕೆ ಒಂದು ಪರಿಣಿತರ ಟೀಮ್ ತಯಾರು ಮಾಡಿ ಆಯಾ ಸಂಘದವರನ್ನು ಹಾಗೂ ರೈತ ಸಂಘದವರನ್ನು ಕಬ್ಬು ಬೆಳೆಗಾರರನ್ನು ಕರೆದುಕೊಂಡು ಅದನ್ನು ಸ್ಟಡಿ ಮಾಡಿ ಒಂದು ವೈಜ್ಞಾನಿಕವಾದ ದರವನ್ನು ನಿರ್ಧಾರ ಮಾಡಬೇಕು. ನಾವು ಸಾಕಷ್ಟು

ಸಭೆಗಳನ್ನು ಮಾಡಿದ್ದೇವೆ. ಆ ಸಭೆ ಮಾಡಿದಾಗ ಅನೇಕ ಪರಿಣಿತರು ಇದ್ದರು. ಇವತ್ತಿನ ದರದಲ್ಲಿ 3750 ರೂ. ಕೊಡುವುದಕ್ಕೆ ಸಾಧ್ಯವಿದೆ ಎಂದು ಅವರು ಹೇಳುತ್ತಾರೆ. ಆದರೆ ಕಾರ್ಖಾನೆಯವರು ನಮಗೆ ಅಷ್ಟು ದರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ನಮಗೆ ನಷ್ಟವಾಗುತ್ತದೆ, ನಾವು ಕಾರ್ಖಾನೆಗೆ ಕೀಲಿ ಹಾಕಬೇಕಾಗುತ್ತದೆ ಎಂದು ಹೇಳುತ್ತಾರೆ. ನಮಗೆ ಅದರ ಬಗ್ಗೆ ಏನೂ ಅರ್ಥವಾಗುವುದಿಲ್ಲ. ಆ ಕಾರಣಕ್ಕಾಗಿ ಸರ್ಕಾರವೇ ಮುಂದಾಗಿ ಇದನ್ನು SAP ರೇಟ್ ಏನು ಹೇಳುತ್ತಾರೆ, ಅಥವಾ ಪರಿಣಿತರ ತಂಡ ತಯಾರು ಮಾಡಿ ಅದನ್ನು ಸಂಪೂರ್ಣ ಸ್ಟಡಿ ಮಾಡಿ ನ್ಯಾಯಯುತವಾದ ಹಾಗೂ ವೈಜ್ಞಾನಿಕವಾದ ಬೆಲೆಯನ್ನು ರೈತರಿಗೆ ಕೊಡುವಂತಹ ಕೆಲಸ ಮಾಡಿದರೆ, ಬಹುಶ: ಭವಿಷ್ಯದಲ್ಲಿ ರೈತರ ಹೋರಾಟ ಸ್ವಲ್ಪ ಮಟ್ಟಿಗೆ ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ ಕಾರ್ಖಾನೆಗಳು ಹಾಳಾಗುತ್ತವೆ, ರೈತರೂ ಹಾಳಾಗುತ್ತಾರೆ. ನಮ್ಮ ರೈತರ ಉದ್ದೇಶ ಏನಿದೆ ಎಂದರೆ, ಕಾರ್ಖಾನೆಯೂ ಉಳಿಯಬೇಕು, ರೈತರೂ ಉಳಿಯಬೇಕು. ಈ ದೃಷ್ಟಿಯಲ್ಲಿ ಸರ್ಕಾರ ಅದರ ಮಧ್ಯಪ್ರವೇಶ ಮಾಡಿ ಅದಕ್ಕೆ ಪರಿಹಾರ ಕಂಡುಹಿಡಿಯುವಂತಹ ಕೆಲಸ ಮಾಡಬೇಕು. ನಮ್ಮ ಭಾಗದಲ್ಲಿ ಏನಾಗಿದೆ ಎಂದರೆ, ಇದರಿಂದ ರೈತರು ಸಾಲಗಾರರಾಗಿ ನೇಣು ಹಾಕಿಕೊಳ್ಳುವ ಪ್ರಸಂಗಗಳು ಬಹಳ ಕಡೆ ಆಗಿವೆ. ಏಕೆಂದರೆ ಮೂರು- ನಾಲ್ಕು ತಿಂಗಳವರೆಗೆ ಕೃಷ್ಣ ನದಿಯಲ್ಲಿ ನೀರು ಇರುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇವತ್ತೇನು ಕಾವೇರಿ ನೀರು ಬಿಡಬೇಕೆಂದು ಸುಪ್ರೀಂ ಕೋರ್ಟ್ ಆರ್ಡರ್ ಮಾಡಿದೆ, ಕಾವೇರಿ ಹೊಳೆಯಲ್ಲಿ ನೀರೇ ಇಲ್ಲ. ಬಿಡುವುದು ಎಲ್ಲಿಂದ ಬಂತು ಗೊತ್ತಿಲ್ಲ. ಆದರೆ ಇದೇ ಕಾಳಜಿ ಕೃಷ್ಣ ಬಗ್ಗೆ ಇಲ್ಲ. ಹೋದ ವರ್ಷ ಸುಮಾರು ನಾಲ್ಕು ತಿಂಗಳು ಕೃಷ್ಣಾ ನದಿ ಬತ್ತಿ ಹೋಗಿ ನಾಲ್ಕೈದು ಕೋಟಿ ರೂ. ಕಬ್ಬಿನ ಬೆಳೆ ನಾಶವಾಯಿತು. ನಮ್ಮ ಕಣ್ಣಾರೆ ರೈತರು ಕಷ್ಟ ಪಟ್ಟು ಒಂದು ಎಕರೆಗೆ ೪೦-೫೦ ಸಾವಿರ ರೂ. ಖರ್ಚು ಮಾಡಿ ಬೆಳೆದಂತಹ ಕಬ್ಬು ತಮ್ಮ ಕಣ್ಣ ಮುಂದೆಯೇ ನಾಲ್ಕು ತಿಂಗಳ ಕಾಲ ನೀರು ಇಲ್ಲದೆ ಗಣಗಣ ಒಣಗಿ ಹೋಯಿತು. ಅಲ್ಲಿಯ ದನಕರುಗಳಿಗೆ ನೀರಿಲ್ಲ. ಪಶು ಪಕ್ಷಿಗಳಿಗೆ ನೀರು ಇಲ್ಲದೆ ಹೋಯಿತು. ನಾವು ಕೃಷ್ಣಾ ಬಗ್ಗೆ ಹೇಳಬೇಕೆಂದರೆ ನಮಗೆ ಸದನದಲ್ಲಿ ಮಾತನಾಡುವುದಕ್ಕೂ ಬಿಡುವುದಿಲ್ಲ ಅದರ ಬಗ್ಗೆ ಪ್ರಯತ್ನವೂ ಮಾಡುವುದಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು

ಹಾಗೂ ನಮ್ಮ ನೀರಾವರಿ ಸಚಿವರು ಮುಂಬೈಗೆ ಹೋಗಿ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಆದರೆ ಒಂದು ಹನಿ ನೀರು ನಮ್ಮ ಭಾಗಕ್ಕೆ ಬಂದು ಹತ್ತಲಿಲ್ಲ. ಇಂತಹ ಒಂದು ಗಂಭೀರ ಪರಿಸ್ಥಿತಿಯಲ್ಲಿ ರೈತರನ್ನು ಉಳಿಸಬೇಕಾದರೆ, ಕೊನೇ ಪಕ್ಷ ನಮ್ಮ ಕೈಯಲ್ಲಿ ಏನಿದೆ, ಪ್ರತಿಯೊಂದಕ್ಕೂ ಒಂದು ನಿಯಮ ಮಾಡಿ ಬಿಡಿ. ಈ ವರ್ಷ ಇಷ್ಟು ಸಕ್ಕರೆ ಇತ್ತು, ಈ ವರ್ಷ ಸಕ್ಕರೆಗೆ ಇಷ್ಟು ಬೆಲೆ ಕೊಡಬೇಕು. ಅವರ conversion cost ಏನು ಬರುತ್ತದೆ conversion cost ಗೆ ಸಕ್ಕರೆ ಬೆಲೆ ಕೊಡುವ ಹಾಗೆ ಮಾಲೀಕರನ್ನು ರೈತ ಮುಖಂಡರನ್ನು ಜನಪ್ರತಿನಿಧಿಗಳನ್ನು ಮುಂದೆ ಕೂರಿಸಿಕೊಂಡು ಟೀಮ್ ಮಾಡಿ ಮಾಡಿದರೆ ನಿರಂತರವಾಗಿ ರೈತರಿಗೆ ಅನುಕೂಲವಾಗುತ್ತದೆ, ಕಾರ್ಖಾನೆ ಕೂಡ ಉದ್ಧಾರ ಆಗುವುದಕ್ಕೆ ಸಾಧ್ಯವಿದೆ. ಕಾರ್ಖಾನೆ ಉಳಿದರೆ ಮಾತ್ರ ರೈತರಿಗೆ ಭವಿಷ್ಯ ಇದೆ. ನಾವು ಕಾರ್ಖಾನೆ ಹಾಳಾಗಿ ರೈತರಿಗೆ ಬೆಲೆ ಕೊಡಿ ಎಂದು ಹೇಳುವುದಿಲ್ಲ. ಆದರೆ ಅವರ ನಿಲುವು ಏನು? ನಮ್ಮ ಎಲ್ಲಾ ಲೆಕ್ಕಾಚಾರಗಳ ಪ್ರಕಾರ ಇವತ್ತಿನ-ದಿವಸ ೩,೭೫೦ ರೂ.ಕೊಡುವುದಕ್ಕೆ ಸಾಧ್ಯವಿದೆ. ಅಷ್ಟು ಕೊಡಿ ಎಂದು ಅವರ ಬೇಡಿಕೆ ಇದೆ. ಅದನ್ನು ಕೊಡುವುದಕ್ಕೆ ಬರುತ್ತದೆ ಇಲ್ಲವೆಂದು ಸರ್ಕಾರ-ದಿಂದ ಟೀಮ್ ಕಳುಹಿಸಿ ಸ್ಟಡಿ ಮಾಡಿ. ರೈತರ ಹಿತದೃಷ್ಟಿಯಿಂದ ಅದು ಆಗುತ್ತದೆ ಇಲ್ಲ, ಅಕಸ್ಮಾತ್ ಆಗುವುದಿಲ್ಲವೆಂದರೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದವರು ರೈತರ ಬೆಂಬಲಕ್ಕೆ ಬರುವಂತಹ ಕೆಲಸ ಆಗಬೇಕು. ರೈತರು ಸ್ವಾಭಿಮಾನದಿಂದ ತಲೆ ಎತ್ತಿ ಬದುಕುವಂತಹ ವಾತಾವರಣ ನಿರ್ಮಾಣ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು ಎನ್ನುವಂಥದ್ದನ್ನು ನಾನು ರೈತರ ಪರವಾಗಿ ನಮ್ಮ ಜಿಲ್ಲಾ ಕಬ್ಬು ಬೆಳೆಗಾರರ ವತಿಯಿಂದ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರೂ ಮತ್ತು ಇನ್ನಿತರ ಎಲ್ಲಾ ಶಾಸಕರು ಇವತ್ತು ಕಬ್ಬಿನ ದರ ನಿಗದಿ ಮತ್ತು ಇನ್ನಿತರ ವಿಚಾರಗಳ ಬಗ್ಗೆ ರೈತರು ಏನು ಸತ್ಯಾಗ್ರಹ ಮಾಡುತ್ತಿದ್ದಾರೆ, ಅದರ ಹಿನ್ನೆಲೆಯಲ್ಲಿ ಇವತ್ತು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬೆಳಗ್ಗೆ ಸಹಿತ ಕೆಲವು ರೈತ ಮುಖಂಡರು ಬಂದು ನನ್ನ ಜೊತೆ ಚರ್ಚೆ ಮಾಡಿದರು. ಹಲವಾರು ವಿಚಾರ-

ಗಳ ಬಗ್ಗೆ ಇವತ್ತು ಏನು ಇಲ್ಲಿ ಸದನದಲ್ಲಿ ಚರ್ಚೆಯಾಗಿದೆ, ಆ ವಿಷಯಗಳನ್ನು ಅವರು ನಾನು ಬೆಳಿಗ್ಗೆ ಬೆಳಗಾಂ ನಗರಕ್ಕೆ ಬಂದ ತಕ್ಷಣ ಚರ್ಚೆ ಮಾಡಿದರು. ಮಧ್ಯಾಹ್ನ ರೈತ ಪ್ರಮುಖರು ಯಾರು ಅಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರನ್ನೂ ಸಹಿತ ನಾನು ಸುವರ್ಣ ವಿಧಾನಸೌಧಕ್ಕೆ ಕರೆಸಿದ್ದೆ. ಅವರೂ ಕೂಡ ನನ್ನ ಜೊತೆ ಚರ್ಚೆ ಮಾಡಿದ್ದಾರೆ. ಕಬ್ಬು ದರ ನಿಗದಿ ಬಗ್ಗೆ ಪ್ರತಿ ವರ್ಷ ಹೋರಾಟ ಮಾಡುವಂಥದ್ದು, ಕಬ್ಬಿನ ಕಾರ್ಖಾನೆಯ ಮಾಲೀಕರನ್ನು ಕರೆಸುವಂಥದ್ದು, ರೈತರು ಅವರನ್ನು ಕರೆಸಿ ಮೀಟಿಂಗ್ ಮಾಡುವಂಥದ್ದು, ಪ್ರತಿ ಹಂತದಲ್ಲಿ ನಡೆಯುತ್ತಿರುವದನ್ನು ಪ್ರತಿ ವರ್ಷ ನಾನು ನೋಡುತ್ತಿದ್ದೇನೆ. ನಾನು ಹಿಂದೆ ಕಂದಾಯ ಸಚಿವನಾಗಿದ್ದಾಗ ಸಕ್ಕರೆ ಇಲಾಖೆ ಅಡಿಷನಲ್ ಛಾರ್ಜ್ ಕೆಲವು ತಿಂಗಳು ಇತ್ತು. ಆ ಸಂದರ್ಭದಲ್ಲಿ ಸಹಿತ ನಾನು ರೈತರ ಜೊತೆ ಅದರ ಬಗ್ಗೆ ಚರ್ಚೆ ಮಾಡಿದ್ದೇನೆ. ಪ್ರತಿ ವರ್ಷ ಮುಖ್ಯ ಮಂತ್ರಿಗಳು ಚರ್ಚೆ ಮಾಡುವುದು ಇವೆಲ್ಲಾ ನಡೆಯುತ್ತಿದೆ. ನಿಜವಾಗಿ ಹೇಳಬೇಕೆಂದರೆ, ಇವತ್ತು ಸರ್ಕಾರಕ್ಕೆ ಈ ದರ ನಿಗಧಿ ಮಾಡುವ ಅಧಿಕಾರ ಇಲ್ಲ. ಆದರೆ ರೈತರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ರೈತರನ್ನೂ ಕರೆದುಕೊಂಡು ಕಾರ್ಖಾನೆ ಮಾಲೀಕರನ್ನೂ ಕೂರಿಸಿಕೊಂಡು ಸಮಾಲೋಚನೆ ಮಾಡಿ ಪ್ರತಿ ವರ್ಷ ದರ ನಿಗಧಿ ಮಾಡುವುದಕ್ಕೆ ಒಂದು ದಾರಿ ಹುಡುಕುವುದು ನಡೆಯುತ್ತಿದೆ. ಅದಕ್ಕೂ ಪೂರ್ಣ ಪ್ರಮಾಣದ ಸಹಕಾರ ಸಿಗುತ್ತದೋ ಇಲ್ಲವೊ ಎನ್ನುವುದು ಪ್ರಶ್ನೆ ಅಲ್ಲ. ಅದು ನಡೆಯುತ್ತಿದೆ. ಈ ಸಾರಿಯೂ ಆ ಪ್ರಶ್ನೆ ನನ್ನ ಕಡೆಗೆ ಬಂದಾಗ ಮಂಡ್ಯ ಮತ್ತು ಮೈಸೂರು ಭಾಗದ ರೈತರ ಮುಖಂಡರು ನನ್ನ ಬಳಿ ಬಂದಾಗ ಅವತ್ತು ನಾನು ಒಂದು ಸಭೆ ಮಾಡಿದ್ದೆ. ಅವತ್ತಿನ ಸಭೆಯಲ್ಲಿ ಬಹಳಷ್ಟು ವಿಚಾರಗಳು ಅಲ್ಲಿ ಚರ್ಚೆ ಆದವು. ಪ್ರತಿ ವರ್ಷ ದರ ನಿಗಧಿ ಮಾಡುವುದು ಇವೆಲ್ಲಾ ನಡೆಯುತ್ತಿದೆ. ಇದಕ್ಕೆ ಏನಾದರೂ ಒಂದು ಶಾಶ್ವತ ಪರಿಹಾರ ಹುಡುಕಬೇಕು. ಶಾಶ್ವತ ಪರಿಹಾರ ಹುಡುಕುವ ದಿಕ್ಕಿನಲ್ಲಿ ಏನಾದರೂ ಪ್ರಯತ್ನ ನಡೆಸಬೇಕು ಎನ್ನುವಂಥದ್ದು ಅವತ್ತು ಚರ್ಚೆಯಾಯಿತು. ಆ ಸಂದರ್ಭದಲ್ಲಿ ಕೆಲವರು ಸಲಹೆ ಕೊಟ್ಟ ಪ್ರಕಾರ ನಾನು ಒಂದು ಸಮಿತಿಯನ್ನೂ ಮಾಡಿದ್ದೆ. ಅವತ್ತು ನಮ್ಮ ಸಕ್ಕರೆ ಸಚಿವರಾದ ಮಾನ್ಯ

ರವೀಂದ್ರನಾಥ್‌ರವರಿಗೆ ಮೈ ಹುಷಾರಿಲ್ಲದೆ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿದ್ದುದರಿಂದ ಕೃಷಿ ಸಚಿವರಾದ ಮಾನ್ಯ ಉಮೇಶ್ ಕತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಿದ್ದೆ. ಅದರಲ್ಲಿ ರೈತ ಮುಖಂಡರು ಮತ್ತು ಕಾರ್ಖಾನೆ ಮಾಲೀಕರು ಮತ್ತು ಅಧಿಕಾರಿಗಳು ಈ ರೀತಿ 15-20 ಜನರ ಸಮಿತಿಯನ್ನು ಮಾಡಿದ್ದೆವು. ಅಂದರೆ ಕೇವಲ ದರ ನಿಗದಿ ಮಾಡುವುದು ಅಷ್ಟೇ ಅಲ್ಲ. ರೆವಿನ್ಯೂ ಷೇರಿಂಗ್ ಕೂಡ ಆಗಬೇಕು. ಬೇರೆ ಬೇರೆ ರೀತಿಯ ಬೈ ಪ್ರಾಡಕ್ಟ್ಸ್ ಏನು ಮಾಡುತ್ತಾರೆ ಅದರ ಮುಖಾಂತರ ಕಾರ್ಖಾನೆ ಮಾಲೀಕರಿಗೆ ಆಧಾಯ ಬರುತ್ತದೆ, ಆ ಆಧಾಯದಲ್ಲಿ ಸಹಿತ ಶೇರು ಬರಬೇಕು ಎನ್ನುವಂಥದ್ದು ಒಂದುವಾದ.

ಈಗಾಗಲೇ ಕೆಲವು ದೇಶಗಳಲ್ಲಿ ಈ ಸಿಸ್ಟಂ ಇದೆ. ಹೆಚ್ಚು ಕಬ್ಬು ಬೆಳೆಯುವಂಥ ಕೆಲವು ದೇಶಗಳಲ್ಲಿ ಈ ಸಿಸ್ಟಂ ಜಾರಿಗೆ ತಂದಿದ್ದಾರೆ. ಹೀಗಾಗಿ ಅದರ ಅಧ್ಯಯನ ಮಾಡುವಂಥದ್ದು ಮತ್ತು ರೇಟ್ ಫಿಕ್ಸ್ ಮಾಡುವಂಥದ್ದು ಆಮೇಲೆ ಅಲ್ಲಿ Revenue Sharing Calculation ಇದೆಲ್ಲದರ ಬಗ್ಗೆ ಚರ್ಚೆಯಾಗಿ ಆ ಒಂದು ರೀತಿಯ ಅಧಿಕಾರವನ್ನು ಆ ಸಮಿತಿಯವರಿಗೆ ಕೊಡಬೇಕಾಗುತ್ತದೆ. ಆದಕಾರಣ ಆ ಸಮಿತಿಯನ್ನು constitute ಮಾಡುವ ಬಗ್ಗೆ ಈಗಾಗಲೇ Government Order ಹೊರಡಿಸಿದ್ದೇವೆ. ಇದುವರೆಗೆ ಸರ್ಕಾರದ recognition ಇರುವ ಸಮಿತಿ ಇರಲಿಲ್ಲ. For the first time ಸರ್ಕಾರದ recognition ಕೊಡುವ ಸಮಿತಿ ಮಾಡುವ ಬಗ್ಗೆ ಈಗಾ-ಗಲೇ constitute ಮಾಡಿದ್ದೇನೆ. ಅದರಲ್ಲಿ ಎಲ್ಲರೂ ಇದ್ದಾರೆ. ಹೀಗಾಗಿ ಒಂದೆರಡ್ಮೂರು ಸಭೆಗಳು ಕೂಡ ಆಯಿತು. ಕೆಲವೊಂದು ಅಭಿಪ್ರಾಯ ಮತ್ತು ಭಿನ್ನಾಭಿಪ್ರಾಯಗಳು ಬಂತು. ಮೂರು ಸಭೆಯೇನೋ ಆಯಿತು. ಮತ್ತೊಂದು ಸಭೆ ಆಗಲಿಲ್ಲ. ಹೀಗಾಗಿ ಈ ಬಗ್ಗೆ ಪ್ರಯತ್ನ ನಡೆಯುತ್ತಿದೆ. ಅಲ್ಲಿಯೂ ಕೂಡ ಈ ಎಲ್ಲಾ ವಿಷಯಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ ದರ ನಿಗದಿ ಮಾಡುವುದಕ್ಕೆ ಸಾಧ್ಯವಿದೆ. ಮಂಡ್ಯ ಮತ್ತು ಮೈಸೂರು ಭಾಗದ ರೈತರು ಚಳುವಳಿ ಮಾಡುವಂಥ ಸಂದರ್ಭದಲ್ಲಿ, ನನ್ನ ಕಡೆ ಭೇಟಿ ಮಾಡಲು ಬಂದಂಥ ಸಂದರ್ಭದಲ್ಲಿ, ಇವತ್ತು ಮೈಷುಗರ್ ಕಾರ್ಖಾನೆ ಮತ್ತು ಇನ್ನಿತರ ಸರ್ಕಾರದ ಕಡೆಯ ಸಕ್ಕರೆ ಕಾರ್ಖಾನೆಗಳೇನಿವೆ ಅಲ್ಲಿ ಪ್ರತಿ ಟನ್ ಕಬ್ಬಿಗೆ 2400 ರೂ.ಗಳ

ಬೆಲೆ ನಿಗದಿ ಮಾಡಿ ಅವರಿಗೆ ತಿಳಿಸಿದ್ದೇವೆ. ಹೀಗಾಗಿ ಆ ಭಾಗದಲ್ಲಿ ಕಬ್ಬಿನ ದರ ಪ್ರತಿ ಟನ್‌ಗೆ ಇಷ್ಟು ಎಂದು ನಿಗದಿಯಾಯಿತು. ಆಮೇಲೆ ಈ ಭಾಗದಲ್ಲಿಯೂ ಕೂಡ ಮೊದಲು 2300 ರೂ. ಎಂದು ಘೋಷಣೆ ಮಾಡಿದ ಮೇಲೆ ರೈತರು ಹೆಚ್ಚು ದರ ನಿಗದಿಗಾಗಿ ಹೋರಾಟ ಮಾಡಿದರು. ಆ ಮೇಲೆ ಕೆಲವು ಫ್ಯಾಕ್ಟರಿಯವರು 2300, 2350, 2400,ಹೀಗೆ ಕೆಲವರು 2500 ರೂ. ಗಳ-ವರೆಗೆ ಘೋಷಣೆ ಮಾಡಿದರು. ಇವತ್ತು ರೈತರ ಜೊತೆ ಮಾತುಕತೆ ಮಾಡಿಕೊಂಡು ಆ ರೀತಿಯಲ್ಲಿ ಕಬ್ಬಿಗೆ ದರವನ್ನು ನಿಗದಿ ಮಾಡುವಂಥದ್ದು ಈ-ಗಾಗಲೇ ಪ್ರಾರಂಭವಾಗಿದೆ. ಇದು ಒಂದು ಹಂತದ್ದು. ಇನ್ನೊಂದು ಈ ವಿಷಯದಲ್ಲಿ ಒಂದು ಅಂಶವನ್ನು ನೀವು ಕೂಡ ಪ್ರಸ್ತಾಪ ಮಾಡಿದಿರಿ. ಇವತ್ತು ರೈತ ಮುಖಂಡರು ನನ್ನ ಜೊತೆ ಬೆಳಿಗ್ಗೆ ಮತ್ತು ಮಧ್ಯಾಹ್ನದಲ್ಲಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಕೆಲವು ಮುಖ್ಯವಾದ ವಿಚಾರಗಳನ್ನು ನಮ್ಮ ಜೊತೆ ಪ್ರಸ್ತಾಪ ಮಾಡಿರುವಂತಹದ್ದು ಇದೆ. ಅದು State Advisory Price ಎನ್ನುವುದು ಇರಬೇಕೆಂದು ಕಾನೂನಿನಲ್ಲಿಯೇ ಮಾಡಬೇಕೆನ್ನುವ ವಿಚಾರ. ಕಾನೂನು ಮಾಡಿದರೆ ನಮ್ಮ ಸರ್ಕಾರಕ್ಕೂ ಅಧಿಕಾರ ಬರುತ್ತದೆ. ನಿಯಂತ್ರಣವನ್ನು ಕೂಡ ಕಬ್ಬಿನ ದರ ವಿಚಾರದಲ್ಲಿ ನಾವು ಮಾಡುವುದಕ್ಕೆ ಸಾಧ್ಯವಿದೆ. ಇಲ್ಲದೇ ಹೋದರೆ via media, ಸರ್ಕಾರ ಕೇವಲ mediator ಆಗಿ ಕೆಲಸ ಮಾಡಬೇಕಾಗುತ್ತದಷ್ಟೆ. ಅದು ಬೈಂಡಿಂಗೋ, ಬೈಂಡಿಂಗ್ ಆಗುವುದಿಲ್ಲವೋ, ಅದೇನೂ ಸಂಬಂಧವಿರುವುದಿಲ್ಲ. ಆದಕಾರಣ ಈ ಒಂದು S.A.P. ಯನ್ನು ನಾವು ಕಾನೂನಿನಲ್ಲಿ ತೆಗೆದುಕೊಂಡು ಬಂದರೆ ಅದರಿಂದ ಇನ್ನೂ ಹೆಚ್ಚು ಮಟ್ಟದಲ್ಲಿ ಗಟ್ಟಿಮುಟ್ಟು ಆಗುವುದಕ್ಕೆ ಸಾಧ್ಯವಿದೆ. ಸರ್ಕಾರದವರು ಕೂಡ ನಿರ್ಬಂಧವನ್ನು ಹೇರುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಅದನ್ನು implement ಮಾಡುವುದಕ್ಕೂ ಕೂಡ ಸಾಧ್ಯವಿದೆ. ಆ ದೃಷ್ಟಿಯಿಂದ ತಾವು express ಮಾಡಿರುವ ಈ S.A.P. ಯನ್ನು ಕಾನೂನಿನಲ್ಲಿ ತರುವುದು ಬಹಳ ಅವಶ್ಯಕವಿದೆ. ಈಗಾಗಲೇ ಈ S.A.P. ಯನ್ನು ಕೆಲವು ರಾಜ್ಯಗಳಲ್ಲಿ ತಂದಿದ್ದಾರೆನ್ನುವ ಮಾಹಿತಿ ನನಗೆ ಬಂದಿದೆ. ಆ ಕಾನೂನುಗಳ ಬಗ್ಗೆ ಕೂಡ ನಾನು ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಸಾಧ್ಯವಾದರೆ ಇದೇ ಅಧಿವೇಶನದಲ್ಲಿ ಅದನ್ನು ಮಂಡನೆ ಮಾಡುವ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:- ಸಾಧ್ಯವಾದರೆ ಎನ್ನುವುದು ಬೇಡ. ಇದೇ ಅಧಿವೇಶನದಲ್ಲಿ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):- ಇದೇ ಅಧಿವೇಶನದಲ್ಲಿ ಮಾಡುವಂಥದ್ದು. ಅಕಸ್ಮಾತ್ ಆಗದೇ ಇದ್ದರೂ ಕೂಡ ಅದನ್ನು ನಾನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಬಂದು ಸುಗ್ರೀವಾಜ್ಞೆ ತರುವಂಥ ಕೆಲಸವನ್ನು ನಾನು ಮಾಡುತ್ತೇನೆ. ಹೀಗಾಗಿ ಈ ಸದನದಲ್ಲಿ ನಾನು ಮಾತು ಕೊಡುತ್ತೇನೆ, ಆ SAP ಕಾನೂನನ್ನು ತರುವಂಥದ್ದು ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ, ಅದನ್ನು ನಾನು ಮಾಡುತ್ತೇನೆ, ಎನ್ನುವಂಥ ಮಾತನ್ನು ತಮಗೆ ಹೇಳಬಯಸುತ್ತೇನೆ. ಅದೊಂದನ್ನು ಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ಶಕ್ತಿ ಬರುತ್ತದೆ. ಆ ಕೆಲಸವನ್ನು ನಾವು ಮಾಡುತ್ತೇವೆ. ಅದೇ ರೀತಿ ಇನ್ನಿತರ ವಿಚಾರಗಳ ಬಗ್ಗೆ. . . .

ಶ್ರೀ ಸಿದ್ದರಾಮಯ್ಯ:- ರೈತರಿಗೆ ಕೊಡಬೇಕಾಗಿರುವ ಬಾಕಿ ಬಗ್ಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ರೈತರಿಗೆ ಬಾಕಿ ಕೊಡಬೇಕಾಗಿರುವ ಬಗ್ಗೆ ಆದಷ್ಟು ಬೇಗ ಮಾಲೀಕರುಗಳ ಸಭೆಯನ್ನು ಕರೆದು ಆ ಬಾಕಿ ಎಷ್ಟಿದೆ, ಯಾವ ಯಾವ ಫ್ಯಾಕ್ಟರಿಯವರು ಈ ವಿಚಾರದಲ್ಲಿ ಏನೇನು ಮಾಡಿದ್ದಾರೆ ಎಂಬುದನ್ನು ಪರಿಶೀಲಿಸಿ ಅವರಿಗೆ ಸೂಚನೆ ಕೊಡುವಂಥ ಕೆಲಸವನ್ನು ನಾನು ಮಾಡು-ತ್ತೇನೆ. ಇದಲ್ಲದೇ ಇನ್ನೂ ಕೆಲವು ವಿಚಾರಗಳನ್ನು ಹೇಳಿದ್ದಾರೆ, ಈ ಷುಗರ್ ಡೈರಕ್ಟರ್ ಮುಖಾಂತರ ಕೆಲವೊಂದು ನಿರ್ಬಂದಗಳನ್ನು ಹೇರುವಂಥದ್ದು, ಅದೇ ರೀತಿ ಪರ್ಚೇಸ್ ಟ್ಯಾಕ್ಸ್ ಎಷ್ಟು, consequence ಏನಾಗುತ್ತದೆ ಎಂಬ ಬಗ್ಗೆ ತಿಳಿದುಕೊಂಡು ಆ ಬಗ್ಗೆ calculation ಮಾಡಿ ಅದರ ಬಗ್ಗೆ ಕೂಡ ನಾವು ನಿರ್ಣಯವನ್ನು ಮಾಡುತ್ತೇವೆ. ಈ Purchase Tax ತೆಗೆಯ-ಬೇಕೆಂದು ರೈತ ಮುಖಂಡರುಗಳು ಕೂಡ ಒತ್ತಾಯವನ್ನು ಮಾಡಿದ್ದಾರೆ. ಅದರ ಬಗ್ಗೆ ಕೂಡ ಪರಿಶೀಲನೆ ಮಾಡಿ ನಿರ್ಣಯವನ್ನು ತೆಗೆದುಕೊಳ್ಳುವಂಥ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು S.A.P. ಬಗ್ಗೆ ಈ ಸದನದಲ್ಲಿಯೇ ಪ್ರಾಮಿಸ್ ಮಾಡುತ್ತಿದ್ದೇನೆ. ಆದಕಾರಣ ನಾನು ಇಂದು ಬೆಳಗ್ಗೆ ಕೂಡ ರೈತರನ್ನು ವಿನಂತಿ ಮಾಡಿದ್ದೇನೆ ಮತ್ತು ಸಂಜೆ ಕೂಡ ಭೇಟಿ ಮಾಡಿದಾಗ ವಿನಂತಿ ಮಾಡಿಕೊಂಡಿದ್ದೇನೆ, ನೀವು ಪ್ರತಿಭಟನೆ-ಯನ್ನು ಮಾಡುವುದನ್ನು ವಿತ್‌ಡ್ರಾ ಮಾಡಿ, ನಿಮ್ಮ ಜೊತೆ ಪ್ರತಿ ಹಂತದಲ್ಲಿ

ಸಮಾಲೋಚನೆ ಮಾಡಿಕೊಂಡು ಸರಿಯಾದ ರೀತಿಯಲ್ಲಿ ನಾವು ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವಂಥ ಮಾತನ್ನು ಹೇಳಿ ಅವರಿಗೂ ಕೂಡ ನಾನು ಈ ಸದನದ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಸದನದ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲ ಮುಖಂಡರಲ್ಲಿಯೂ ಕೂಡ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಮುಖ್ಯಮಂತ್ರಿಗಳೆ, ನೀವು ರೈತರ ಹಿತದೃಷ್ಟಿಯಿಂದ ಕಬ್ಬಿನ ದರ ನಿಗದಿ ಬಗ್ಗೆ S.A.P.ಯನ್ನು ಕಾನೂನಿನಲ್ಲಿ ತರುತ್ತೇನೆ ಎಂದು ಹೇಳಿದಿರಿ. ಬಹಳ ಸಂತೋಷ. ಬೇರೆ ರಾಜ್ಯಗಳಲ್ಲಿ ಕೂಡ ಇದು ಈಗಾಗಲೇ ಜಾರಿಯಲ್ಲಿದೆ ಎಂದು ಹೇಳಿದಿರಿ. ಈಗ ನಾವು ಇನ್ನೂ ನಾಲ್ಕೈದು ದಿನಗಳ ಕಾಲ ಬೆಳಗಾಂನಲ್ಲಿಯೇ ಅಧಿವೇಶನ ನಡೆಸುತ್ತಿದ್ದೇವೆ. ಈಗಲೇ ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ತರಿಸಿ-ಕೊಂಡು, ತ್ವರಿತವಾಗಿ ಕಾನೂನು ಮಾಡಿಸಿ, ಈ ಅಸೆಂಬ್ಲಿ ಮುಗಿಯುವುದರೊಳಗೆ ನಾವು ಅದನ್ನು ಮಾಡಿಬಿ-ಡೋಣ. ಇದನ್ನು ಮುಂದಕ್ಕೆ ಹಾಕಿದರೆ ಸರಿ ಯಾಗುವುದಿಲ್ಲ. ಮುಂದೆ ಇದರ ಬಗ್ಗೆ ನಾವು ಆರ್ಡಿನೆನ್ಸ್ ಹೊರಡಿಸುತ್ತೇವೆ ಎನ್ನುವಂಥದ್ದು, ಮತ್ತೆ ಅದು ಡಿಲೇ ಆಗುವುದು, ಹೀಗಾಗಿ ಬಹಳ ತಾಪತ್ರಯವಾಗುತ್ತದೆ. ನೀವು ಕೂಡಲೇ ಈ ಬಗ್ಗೆ ಮಾಹಿತಿಗಳನ್ನು ತರಿಸಿಕೊಳ್ಳಿ. ನಾಳೆ, ನಾಡಿದ್ದರಲ್ಲಿಯೇ ಮಾಹಿತಿಗಳನ್ನು ತರಿಸಿಕೊಳ್ಳುವುದು ದೊಡ್ಡ ವಿಚಾರವೇನಲ್ಲ. ಯಾವ ರಾಜ್ಯದಲ್ಲಿ ಕಾನೂನು ಮಾಡಿ ಇಂಪ್ಲಿಮೆಂಟ್ ಮಾಡಿದ್ದಾರೆ ಆ ಕಾನೂನಿನ ಪ್ರತಿಯನ್ನು ತರಿಸಿಕೊಳ್ಳಿ. ಈಗಾಗಲೇ ನಾಲ್ಕೈದು ರಾಜ್ಯ ಗಳಲ್ಲಿ ಮಾಡಿದ್ದಾರೆಂದು ಹೇಳಿದ್ದೀರಿ. ಅದನ್ನು ಕೂಡಲೇ ತರಿಸಿ ಕಾನೂನು ಮಾಡಿ, ಈ ಸೆಷನ್ ಮುಗಿಯುವುದರೊಳಗೆ ನಾವು ಕಾನೂನು ಮಾಡಿಬಿಡೋಣ. ನಮ್ಮ ರೈತರಿಗೂ ಕೂಡ ಸಮಾಧಾನವಾ-ಗುತ್ತದೆ. ಇನ್ನು ರೈತರಿಗೆ ಕೊಡಬೇಕಾಗಿರುವ ಬಾಕಿಯನ್ನು ಕೂಡಲೇ ಕೊಡಬೇಕು. ಕೂಡಲೇ ಸಕ್ಕರೆ ಕಾರ್ಖಾನೆಯ ಮಾಲೀಕರುಗಳನ್ನು ಕರೆದು ಯಾರು ಯಾರು ರೈತರಿಗೆ ಎಷ್ಟೆಷ್ಟು ಬಾಕಿ ಕೊಡಬೇಕಾಗಿದೆ ಎಂಬುದನ್ನು ತಿಳಿದುಕೊಂಡು ಆ ಬಾಕಿಗೆ ಬಡ್ಡಿ ಸಮೇತ ವಸೂಲು ಮಾಡಿ ರೈತರಿಗೆ ಕೊಡಬೇಕು. ಅದಕ್ಕೂ ಮುಂಚೆ ಕಬ್ಬಿಗೆ ಒಂದು ಬೆಲೆ ನಿಗದಿ ಮಾಡಿ ನೀವು ಸಕ್ಕರೆ ಕಾರ್ಖಾನೆಯವರಿಗೆ ನೀವು ಹೇಳಬೇಕು. ರೈತರಿಗೆ ಇವತ್ತು ಬಹಳ

ತೊಂದರೆಯಾಗುತ್ತಿರುವುದೇನೆಂದರೆ, ಕೂಲಿ ಕೊಡುವುದು, ಸಾಗಾಣಿಕೆ ವೆಚ್ಚ, ಕಟಿಂಗ್ ಚಾರ್ಜ್, ಇವೆಲ್ಲವೂ ಹೆಚ್ಚಾಗಿ ಬಹಳ ತೊಂದರೆಯಾಗುತ್ತಿದೆ. ಫ್ಯಾಕ್ಟರಿಗಳವರೇ ಇವುಗಳನ್ನೆಲ್ಲಾ ಮಾಡಿಕೊಳ್ಳಬೇಕು ಎನ್ನುವ ಹಾಗೆ ಸರ್ಕಾರ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ 132 ಕೋಟಿ ರೂ.ಗಳ ಷೇರುಗಳನ್ನು ರೈತರಿಂದ ಕಲೆಕ್ಟ್ ಮಾಡಿಕೊಡಲಾಗಿದೆ. ಸುಮಾರು ಎರಡು ವರ್ಷಗಳಿಂದ ಸುಮಾರು 36 ಕೋಟಿ ರೂ.ಗಳ ಬಾಕಿ ರೈತರಿಗೆ ಕೊಡಬೇಕು ಎಂದು ನಮ್ಮ ಗಮನಕ್ಕೆ ಬಂದಿದೆ. ಅದು ನಿಜವೆಂದು ಮಾನ್ಯ ನಿರಾಣಿಯವರು ಒಪ್ಪಿಕೊಂಡಿದ್ದಾರೆ. ಕೇದಾರ್ ಕಾರ್ಖಾನೆ ಎಂದು ಹೇಳಲಾಗಿದೆ.

ಶ್ರೀ ಮುರುಗೇಶ್ ನಿರಾಣಿ:- ಅದರ ಬಗ್ಗೆ ನಾನು ಹೇಳಲಿಲ್ಲ.ಅದು ನನ್ನದಲ್ಲ.

ಉಪಾಧ್ಯಕ್ಷರು:- ಮಾನ್ಯ ಸಚಿವರು ತಮ್ಮ ಸ್ಥಾನಕ್ಕೆ ಹೋಗಿ ಮಾತ-ನಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:- ನಿಮ್ಮದು ಎಂದು ನಾನು ಹೇಳುತ್ತಿಲ್ಲ ಸಾರ್. ರೈತರಿಗೆ ಕೊಡ ಬೇಕಾಗಿರುವ ೧೬ ಕೋಟಿ ರೂ.ಗಳ ಬಾಕಿಯನ್ನು ಕೂಡಲೇ ಕೊಡಬೇಕು. ಆ ರೈತರಿಗೆ ಬಡ್ಡಿ ಸಮೇತ ಬಾಕಿ ಕೊಡಿಸಬೇಕು. ಮತ್ತೆ ಇದೇ ರೀತಿ ಯಾವ ಯಾವ ಕಾರ್ಖಾನೆಗಳವರು ಬಾಕಿ ಕೊಡಬೇಕೋ ಅದಕ್ಕೆ ಬಡ್ಡಿ ಸಮೇತ ವಸೂಲು ಮಾಡಿ ರೈತರಿಗೆ ಕೊಡಿಸಬೇಕು. ಇನ್ನು SAP ಮಾಡುವ ಬಗ್ಗೆ ಕಾನೂನನ್ನು ತರುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ದಯಮಾಡಿ ಅದನ್ನು ಬೇಗ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಕೇದಾರನಾಥ್ ಫ್ಯಾಕ್ಟರಿಯವರಿಂದ ರೈತರಿಗೆ ಬರಬೇಕಾಗಿರುವ ಬಾಕಿಯನ್ನು ಬಡ್ಡಿ ಸಮೇತ ಆದಷ್ಟು ಶೀಘ್ರವಾಗಿ ರೈತರಿಗೆ ಕೊಡಿಸಬೇಕು. ಎರಡು ವರ್ಷದಿಂದ ಬಾಕಿ ಉಳಿಸಿಕೊಂಡಿದ್ದಾರೆ. ಅದನ್ನು ಮೊದಲು ಕೊಡಿಸಬೇಕೆಂ-ದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ನೀರಿನ ವಿಚಾರದ ಬಗ್ಗೆ ಸಂಜೆ ಉತ್ತರ